ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಮಂಗಳವಾರ, ಮೇ 16, 2023
ದಾವಣಗೆರೆ | ಪುಟ : 6 | ರೂ : 5.00
ಸಂಪುಟ : 50 | ಸಂಚಿಕೆ : 02 | RNI : 27369/75

1974 2023

janathavani@mac.com
www.janathavani.com
08192 254736 | 91642 99999

## ರಾಜಸ್ಥಾನದಲ್ಲಿ ಬಿರುಸಾದ ಭಿನ್ನಮತ

ಜೈಪುರ, ಮೇ 15 – ಬಿಜೆಪಿಯ ಭ್ರಷ್ಟಾಚಾರದ ವಿರುದ್ಧ ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಕ್ರಮ ತೆಗೆದುಕೊಳ್ಳದೇ ಹೋದರೆ ಈ ತಿಂಗಳ ಅಂತ್ಯದಲ್ಲಿ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಎಚ್ಚರಿಸಿದ್ದಾರೆ.

**ರಾಜ್ಯಾದ್ಯಂತ ಪ್ರತಿಭಟನೆ ಎಚ್ಚರಿಕೆ**

ಸಾರ್ವಜನಿಕ ಸಭೆಯಲ್ಲಿ ಮಾತನಾಡುವಾಗ ತಮ್ಮ ಸರ್ಕಾರದ ವಿರುದ್ಧವೇ ವಾಗ್ದಾಳಿ ನಡೆಸಿದ ಅವರು, ನಾನು ಇದುವರೆಗೂ ನಿರಶನ ನಡೆಸಿದ್ದೇನೆ. ಪಾದಯಾತ್ರೆ ಮಾಡಿದ್ದೇನೆ. ಇನ್ನೂ ಕ್ರಮ ತೆಗೆದುಕೊಳ್ಳದೇ ಹೋದರೆ ರಾಜ್ಯಾದ್ಯಂತ ಪ್ರತಿಭಟನೆ ನಡೆಸುತ್ತೇನೆ ಎಂದರು. ನಾವು ಬರಿಗಾಲಲ್ಲಿ ಹಳ್ಳಿಗಳಿಗೆ ಹೋಗುತ್ತೇವೆ. ಅವರಿಗೆ ನ್ಯಾಯ ಒದಗಿಸುತ್ತೇವೆ ಎಂದು ಪೈಲಟ್ ಹೇಳಿದರು. ಸಮಾವೇಶದಲ್ಲಿ ಕಾಂಗ್ರೆಸ್ ಪಕ್ಷದ 14 ಶಾಸಕರು ಉಪಸ್ಥಿತರಿದ್ದರು.

2020ರಲ್ಲಿ ಪೈಲಟ್ ಬಂಡಾಯ ಎದ್ದಿದ್ದರು. ನಂತರ ಹೈಕಮಾಂಡ್ ಮಧ್ಯ ಪ್ರವೇಶಿಸಿ ಪರಿಸ್ಥಿತಿ ಬಗೆಹರಿಸಿತ್ತು. ಆದರೆ, ರಾಜಸ್ಥಾನದ ಚುನಾವಣೆ ಸಮೀಪಿಸುತ್ತಿರುವಂತೆಯೇ ಪೈಲಟ್ ಹೋರಾಟ ಆರಂಭಿಸಿದ್ದಾರೆ. ಅವರ ಪ್ರತಿಭಟನೆಯ ಹೇಳಿಕೆ ಭಿನ್ನಮತದ ಬೆಂಕಿಗೆ ಇನ್ನಷ್ಟು ತುಪ್ಪ ಸುರಿದಿದೆ.












# ಅಭಿವೃದ್ಧಿ ಕಾರ್ಯಗಳೇ ನನ್ನ ಕೈ ಹಿಡಿದವು



## ಹರಿಹರದಲ್ಲಿ ಶಾಸಕ ಬಿ.ಪಿ. ಹರೀಶ್

ಹರಿಹರ, ಮೇ 15- ಹಿಂದೆ ತಾವು ಶಾಸಕರಾಗಿದ್ದ ಸಮಯದಲ್ಲಿ ಕ್ಷೇತ್ರದಲ್ಲಿ, ಮತದಾರರು ನಿರೀಕ್ಷೆ ಮಾಡದೇ ಇರುವಷ್ಟು ಅಭಿವೃದ್ಧಿ ಮಾಡಿದ್ದೇನೆ. ಆ ಕೆಲಸಗಳನ್ನು ಮೆಚ್ಚಿ ಮತ್ತೊಮ್ಮೆ ನನಗೆ ಆಶೀರ್ವಾದ ಮಾಡಿದ್ದಾರೆ ಎಂದು ಶಾಸಕ ಬಿ.ಪಿ.ಹರೀಶ್ ಹೇಳಿದರು.

ಮತದಾರರ ನಿರೀಕ್ಷೆಗೆ ತಕ್ಕಂತೆ ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಮೂಲಕ ರಾಜ್ಯದಲ್ಲಿ ಮಾದರಿ ತಾಲ್ಲೂಕು ಮಾಡುವ ನಿಟ್ಟಿನಲ್ಲಿ ಹೆಜ್ಜೆಗಳನ್ನು ಹಾಕುವುದಾಗಿ ಅವರು ಹೇಳಿದರು. ಚುನಾವಣೆಯಲ್ಲಿ ಗೆದ್ದ ನಂತರ ನಗರದ ಮಾಜೇನಹಳ್ಳಿ ಊರಮ್ಮದೇವಿಗೆ ವಿಶೇಷ ಪೂಜೆಯನ್ನು ಸಲ್ಲಿಸಿ ನಂತರ ಹರೀಶ್ ಮಾತನಾಡಿದರು.

ನಾನು ಹಿಂದೆ ಕ್ಷೇತ್ರದ ಶಾಸಕರಾಗಿದ್ದ ಸಮಯದಲ್ಲಿ ಹಲವಾರು ಕೋಟಿ ರೂಪಾಯಿ ಅನುದಾನವನ್ನು ತಂದು ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಕ್ಷೇತ್ರದ ಮತದಾರರ ಮನಸ್ಸನ್ನು ಗೆದ್ದಿದ್ದೆ. ಆದರೆ ಕಳೆದ ಬಾರಿ ಚುನಾವಣೆಯಲ್ಲಿ ಯಾವುದೋ ಒಂದು ಸಣ್ಣ ತಪ್ಪಾಗಿ ಕಡಿಮೆ ಮತಗಳ ಅಂತರದಿಂದ ಸೋಲುವಂತಾಗಿತ್ತು. ಆದರೆ ಈ ಬಾರಿ ಮತದಾರರು ನನಗೆ ಮತ್ತೊಮ್ಮೆ ಆಶೀರ್ವಾದ ಮಾಡಿದ್ದಾರೆ ಎಂದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಮಾತನಾಡಿ, ತಾಲ್ಲೂಕಿನ ಅಭಿವೃದ್ಧಿ ಕುಂಠಿತವಾಗಿದ್ದನ್ನು ಜನರು ಮನಗಂಡು ಬಿ.ಪಿ. ಹರೀಶ್ ಗೆಲ್ಲಿಸುವ ಕಾರ್ಯವನ್ನು ಮಾಡಿದ್ದಾರೆ. ಆದರೆ ರಾಜ್ಯದಾದ್ಯಂತ ಪಕ್ಷಕ್ಕೆ ಹಿನ್ನಡೆ ಆಗಿದೆ. ಈ ತರಹ ಫಲಿತಾಂಶ ಬರುತ್ತದೆ ಎಂದು ನಿರೀಕ್ಷೆ ಮಾಡಿರಲಿಲ್ಲ. ಮತದಾರರು ಕೊಟ್ಟಿರುವ ತೀರ್ಪನ್ನು ಸ್ವಾಗತಿಸಿ, ಮುಂದಿನ ದಿನಗಳಲ್ಲಿ ಎಲ್ಲಿ ತಪ್ಪಾಗಿದೆಯೋ ಅದನ್ನು ಸರಿಪಡಿಸಲು ಮುಂದಾಗುವ ನಿಟ್ಟಿನಲ್ಲಿ ಹೆಜ್ಜೆಗಳನ್ನು ಹಾಕಲಾಗುತ್ತದೆ ಎಂದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ತಾಲ್ಲೂಕಿನಲ್ಲಿ ಹರೀಶ್‌ರನ್ನು ಗೆಲ್ಲಿಸುವ ಮೂಲಕ ಮತದಾರರು ತಮ್ಮ ಪ್ರಬುದ್ಧತೆಯನ್ನು ಮೆರೆದಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಗರ ಬಿಜೆಪಿ ಅಧ್ಯಕ್ಷ ಅಜಿತ್ ಸಾವಂತ್, ಪ್ರಧಾನ ಕಾರ್ಯದರ್ಶಿ ಹೆಚ್. ಮಂಜಾನಾಯ್ಕ್, ತುಳಜಪ್ಪ ಭೂತೆ, ಗ್ರಾಮಾಂತರ ಘಟಕದ ಅಧ್ಯಕ್ಷ ಲಿಂಗರಾಜ್, ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ವಿಜಯಕುಮಾರ್, ಹನುಮಂತಪ್ಪ, ರಜನಿಕಾಂತ್, ಮುಖಂಡರಾದ ಅರ್ಜುನ್ ಬಿ.ಪಿ. ಹರೀಶ್, ಬಾತಿ ಚಂದ್ರಶೇಖರ್, ರಾಜು ರೋಖಡೆ, ನಿರಂಜನ ದೀಟೂರು, ಗಂಗನಹರಸಿ ಉಮೇಶ್, ಚಂದ್ರಕಾಂತ, ಬಸವನಗೌಡ, ವೀರೇಶ್ ಅಜ್ಜಣ್ಣನವರ್, ನಾಗರಾಜ್ ಭಂಡಾರಿ, ಮಹಾಂತೇಶ್, ಕೊಂಡಜ್ಜಿ ರಾಘವೇಂದ್ರ, ಸಂತೋಷ ಗುಡಿಮನಿ, ಅಂಬುಜಾ ಪಿ. ರಾಜೊಳ್ಳಿ, ಆನಂದ ವಕೀಲ, ಸುನೀಲ್, ರವಿ ರಾಯ್ಕರ್, ವರಪ್ರಸಾದ್, ಅಶೋಕ ಕುಂಬಳೂರು, ಆಟೋ ರಾಜು, ಎನ್.ಇ. ಸುರೇಶ್, ಬೆಣ್ಣೆ ಸಿದ್ದೇಶ್, ಮಂಜುನಾಥ್ ಅಗಡಿ, ಪ್ರಕಾಶ್, ಪ್ರವೀಣ್ ಪವಾರ್, ರೂಪಾ, ಇತರರು ಹಾಜರಿದ್ದರು.

## ರೈತರ ಮಕ್ಕಳಿಗೆ 10 ತಿಂಗಳವರೆಗೆ ತೋಟಗಾರಿಕೆ ತರಬೇತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಮೇ.15- ರೈತರ ಮಕ್ಕಳಿಗೆ 10 ತಿಂಗಳವರೆಗೆ ಚಿತ್ರದುರ್ಗ ಜಿಲ್ಲೆಯ ಐಯ್ಯನಹಳ್ಳಿ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ, ಬರುವ ಜೂನ್ ತಿಂಗಳಿಂದ ಮಾರ್ಚ್ 2024ರವರೆಗೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿ ನಮೂನೆಗಳನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯವಲಯ ದಾವಣಗೆರೆ ಅಥವಾ ಇಲಾಖಾ ವೆಬ್‌ಸೈಟ್ http://horticulturedir.karnataka.gov.in ನಲ್ಲಿ ಪಡೆಯಬಹುದು. ಅರ್ಜಿ ಸಲ್ಲಿಸಲು ಮೇ 22 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08192-230049ನ್ನು ಸಂಪರ್ಕಿಸಬಹುದು.

# ಮೋದಿ ನಾಮಬಲ ನೀಡದ ಫಲ

## 2019ಕ್ಕೆ ಹೋಲಿಸಿದರೆ ಬಿಜೆಪಿ ಮತ ಗಳಿಕೆ ಶೇ.22ರ ಕುಸಿತ



ದಾವಣಗೆರೆ, ಮೇ 14 - ಡಬಲ್ ಇಂಜಿನ್ ಸರ್ಕಾರ ಎಂಬ ಸೂತ್ರ ಹಿಡಿದು ಪ್ರಧಾನ ಮಂತ್ರಿ ನರೇಂದ್ರ ಮೋದಿ ನಾಮ ಬಲದ ಮೂಲಕವೇ ಚುನಾವಣೆಯಲ್ಲಿ ಗೆಲುವು ಸಾಧಿಸಬೇಕೆಂಬ ಬಿಜೆಪಿ ಪ್ರಯತ್ನ ಜಿಲ್ಲೆಯಲ್ಲಿ ಫಲ ನೀಡಿಲ್ಲ.

ಮೋದಿ ನಾಮದ ಬಲವೊಂದಿದ್ದರೆ ಸಾಕು ಎನ್ನುತ್ತಿದ್ದವರಿಗೆ, ಮತದಾರ ನೀನ್ಯಾಕೋ, ನಿನ್ನ ಹಂಗ್ಯಾಕೋ ಎಂದು ಹೇಳಿ ಕೈತೊಳೆದುಕೊಂಡಿರುವುದು ಫಲಿತಾಂಶದಿಂದ ಸ್ಪಷ್ಟವಾಗುತ್ತಿದೆ.

ಈ ಬಾರಿ ದಾವಣಗೆರೆ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ 7 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶೇ.46.61, ಬಿಜೆಪಿ ಶೇ.32.58, ಜೆಡಿಎಸ್ ಶೇ.5.17 ಹಾಗೂ ಇತರರು ಶೇ.15.64ರಷ್ಟು ಮತ ಪಡೆದಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಹರಪನಹಳ್ಳಿ ಕ್ಷೇತ್ರ ಹೊರತಾದ ದಾವಣಗೆರೆ ಜಿಲ್ಲೆಯ 7 ಕ್ಷೇತ್ರಗಳಲ್ಲಿ ಬಿಜೆಪಿ ಶೇ.55ರಷ್ಟು ಮತ ಗಳಿಸಿತ್ತು. ಆದರೆ, ಈ ಬಾರಿಯ ಅವೇ ಕ್ಷೇತ್ರಗಳಲ್ಲಿ ಬಿಜೆಪಿ ಗಳಿಸಿದ ಮತಗಳ ಪ್ರಮಾಣ ಕೇವಲ ಶೇ.32.58! 2019ರ ಲೋಕಸಭಾ ಚುನಾವಣೆಗೆ ಹೋಲಿಸಿದರೆ, ಈ ಬಾರಿ ಬಿಜೆಪಿ ಗಳಿಕೆಯ ಮತಗಳ ಪ್ರಮಾಣ ಬರೋಬ್ಬರಿ ಶೇ.22ರಷ್ಟು ಕಡಿಮೆಯಾಗಿದೆ.

ಲೋಕಸಭೆ ಹಾಗೂ ರಾಜ್ಯ ವಿಧಾನಸಭಾ ಚುನಾವಣೆಗಳ ಹೋಲಿಕೆ ಮಾಡಲಾಗದು. ಆದರೆ, ಈ ಬಾರಿ ಬಿಜೆಪಿಯು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನೇ ಪ್ರಮುಖವಾಗಿ ಮುಂದಿಟ್ಟುಕೊಂಡು ಚುನಾವಣಾ ಪ್ರಚಾರ ನಡೆಸಿತ್ತು. ದಾವಣಗೆರೆಯಲ್ಲಿ ಪ್ರಧಾನಿಯವರ ಬೃಹತ್ ಸಮಾವೇಶವನ್ನೂ ನಡೆಸಲಾಗಿತ್ತು. ಪ್ರಧಾನಿ ಆಶೀರ್ವಾದದಿಂದ ಕರ್ನಾಟಕ ವಂಚಿತವಾಗಬಾರದು ಎಂದು ಬಿಜೆಪಿ ಹಿರಿಯ ನಾಯಕರು ಕಳಕಳಿಯನ್ನೂ ವ್ಯಕ್ತಪಡಿಸಿದ್ದರು. ಆದರೂ, ಮತದಾರ ಡಬಲ್ ಇಂಜಿನ್ ಸರ್ಕಾರದ ಸೂತ್ರದ ಬದಲು ಕಾಂಗ್ರೆಸ್‌ನ ಗ್ಯಾರಂಟಿಯನ್ನೇ ಆಯ್ಕೆ ಮಾಡಿಕೊಂಡಿದ್ದಾನೆ.

2019ರ ಲೋಕಸಭಾ ಚುನಾವಣೆಯಲ್ಲಿ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಶೇ.40.71ರಷ್ಟು ಮತ ಪಡೆದಿತ್ತು. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಇವೇ ಕ್ಷೇತ್ರಗಳಲ್ಲಿ ಶೇ.46.61ರಷ್ಟು ಮತ ಪಡೆದಿದೆ. ಪಕ್ಷ ಗಳಿಸಿದ ಮತಗಳ ಪ್ರಮಾಣ ಶೇ.6ರಷ್ಟು ಹೆಚ್ಚಾಗಿದೆ.

ಲೋಕಸಭೆ ಹಾಗೂ ರಾಜ್ಯ ವಿಧಾನಸಭಾ ಚುನಾವಣೆಗಳನ್ನು ಕರ್ನಾಟಕದ ಮತದಾರ ಪ್ರತ್ಯೇಕವಾಗಿ ಪರಿಗಣಿಸುವಷ್ಟು ಪ್ರಜ್ಞಾವಂತಿಕೆ ತೋರುತ್ತಲೇ ಬಂದಿದ್ದಾನೆ. ಏಕಕಾಲಕ್ಕೆ ಲೋಕಸಭೆ ಹಾಗೂ ವಿಧಾನಸಭಾ ಚುನಾವಣೆ ನಡೆದ ಸಂದರ್ಭದಲ್ಲೂ ಮತದಾರ ಬೇರೆ ಬೇರೆ ರೀತಿಯಲ್ಲೇ ಮತ ಚಲಾಯಿಸಿದ್ದಾನೆ. ಹೀಗಾಗಿ ಬಿಜೆಪಿಯು ಡಬಲ್ ಇಂಜಿನ್ ಸರ್ಕಾರದ ಸೂತ್ರ ಮುಂದಿಟ್ಟು ಮೋದಿ ಅಬ್ಬರದ ಪ್ರಚಾರ ನಡೆಸಿದ್ದರೂ, ಸ್ಥಳೀಯ ವಿಷಯಗಳನ್ನೇ ಮತದಾರ ಪರಿಗಣಿಸಿದ್ದಾನೆ.

ಇದಕ್ಕೊಂದು ಉತ್ತಮ ಉದಾಹರಣೆ ಎಂದರೆ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ. 2019ರ ಲೋಕಸಭಾ ಚುನಾವಣೆಯಲ್ಲಿ ದಾವಣಗೆರೆ ಉತ್ತರ ಕ್ಷೇತ್ರದಲ್ಲಿ ಕಾಂಗ್ರೆಸ್ ಪರವಾಗಿ 50,374 ಮತಗಳು ದೊರೆತಿದ್ದವು. ಆಗ ಬಿಜೆಪಿಗೆ ಎರಡು ಪಟ್ಟು 1,04,480 ಮತಗಳು ದೊರೆತಿದ್ದವು! 2013ರ ವಿಧಾನಸಭಾ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಬಿಜೆಪಿಗೆ ಕೇವಲ 69,547 ಮತಗಳು ದೊರೆತಿದ್ದರೆ, ಕಾಂಗ್ರೆಸ್‌ಗೆ 94,019 ಮತಗಳು ಬಂದಿವೆ.

ವಿಧಾನಸಭಾ ಚುನಾವಣೆ ಮುಗಿದ ಮುನ್ನೂರು ಚಿಲ್ಲರೆ ದಿನಗಳಲ್ಲೇ ಲೋಕಸಭಾ ಚುನಾವಣೆ ಬರಲಿದೆ. ದೇಶ ಹಾಗೂ ರಾಜ್ಯಗಳ ಚುನಾವಣೆಯಲ್ಲಿ ಬೇರೆ ಬೇರೆಯಾಗಿ ವರ್ತಿಸುವ ಮತದಾರ, ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬೇರೆ ಜನಾದೇಶ ನೀಡುವ ಸಾಧ್ಯತೆಯೂ ಇದೆ. ಈ ಹಿನ್ನೆಲೆಯಲ್ಲಿ ರಾಜ್ಯ ವಿಧಾನಸಭಾ ಫಲಿತಾಂಶ ಎಲ್ಲ ರಾಜಕೀಯ ಮುಖಂಡರಿಗೆ ಎಚ್ಚರಿಕೆ ಗಂಟೆಯಾಗಿದೆಯೇ ಹೊರತು, ನೆಮ್ಮದಿಯಾಗಿರಿಸುವ ಸಂದೇಶವಂತೂ ಅಲ್ಲ.

# ಚಿರತೆ ಪ್ರತ್ಯಕ್ಷ : ಬೋನಿಟ್ಟು ಸೆರೆಗೆ ಮುಂದಾದ ಅಧಿಕಾರಿಗಳು



## ಹೆಜ್ಜೆ ಗುರುತನ್ನು ಗಮನಿಸಿದರೆ ಆರು ವರ್ಷದ ಚಿರತೆ ಎಂಬುದು ಅಧಿಕಾರಿಗಳ ಸ್ಪಷ್ಟನೆ

ಹೊನ್ನಾಳಿ, ಮೇ 15- ಪಟ್ಟಣದ ತುಂಗಭದ್ರಾ ಬಡಾವಣೆ ಮೇಲು ಭಾಗದ ಜಮೀನೊಂದರಲ್ಲಿ ಇಂದು ಬೆಳಿಗ್ಗೆ ಚಿರತೆ ಪ್ರತ್ಯಕ್ಷವಾದ ಮಾಹಿತಿ ಜಮೀನಿನ ಮಾಲೀಕ ಸಂದೀಪ್ ತಂದೆ ಹೆಚ್.ಎಂ. ಚಂದ್ರುಕುಮಾರ್‌ರವರ ಮೂಲಕ ಪಡೆದು, ಸಂಬಂಧಪಟ್ಟ ಅಧಿಕಾರಿಗಳು ಬೋನಿಟ್ಟು ಚಿರತೆ ಹಿಡಿಯುವ ಕಾರ್ಯಾಚರಣೆಗೆ ಮುಂದಾದ ಘಟನೆ ನಡೆದಿದೆ.

ಜಮೀನು ಮಾಲೀಕ ಸಂದೀಪ್ ಮಾತನಾಡಿ, ಮಾರಿಕೊಪ್ಪ ಸರ್ವೆ ನಂ.7/1 ರಲ್ಲಿನ 50 ಎಕರೆ ಕಾಡು ಪ್ರದೇಶದಂತಿರುವ ಜಮೀನಿನಲ್ಲಿ ಚಿರತೆ ಕಂಡಿದ್ದು, ಕಳೆದ 5 ತಿಂಗಳ ಕೆಳಗೆ ಇಲ್ಲಿ ಬೋನಿಟ್ಟರೂ ಚಿರತೆ ಹಿಡಿಯಲು ಸಾಧ್ಯವಾಗಿರಲಿಲ್ಲ. ಇಂದು ಚಿರತೆ ಕಾಣಿಸಿಕೊಂಡು ಭಯದ ವಾತಾವರಣ ಸೃಷ್ಟಿಯಾಗಿದೆ ಎಂದರು.

ಜಮೀನಿನ ಹತ್ತಿರದಲ್ಲಿ ಆಶ್ರಯ ಮನೆಗಳಿದ್ದು, ಇತ್ತೀಚೆಗೆ ಅಲ್ಲಿ ಕಾಣಿಸಿಕೊಂಡಿದ್ದಲ್ಲದೆ, ಮಾರಿಕೊಪ್ಪ ಹಳದಮ್ಮ ದೇವಸ್ಥಾನದ ಬಳಿಯು ಕಂಡಿದೆ ಎಂದು ಜನ ಮಾಹಿತಿ ನೀಡಿದ್ದು, ಇಲ್ಲಿನ ಜಮೀನುಗಳ ಕೆಲಸಗಳಿಗೆ ಕೂಲಿಗಳು ಬರದೇ ಪೇರಲ, ತೆಂಗು, ಅಡಿಕೆ, ತಾಳೆಯ ಬೆಳೆಗಳಿಗೆ ಸರಿಯಾದ ಸಮಯಕ್ಕೆ ನೀರು ಹರಿಸಲು ಆಗದೆ ಕಳೆದ ಎರಡು ತಿಂಗಳಿಂದ ಒಂದು ಲಕ್ಷ ರೂ.ಗಳಿಗೂ ಹೆಚ್ಚು ಬೆಳೆಯ ಆದಾಯದಲ್ಲಿ ನಷ್ಟವಾಗಿದೆ.

ಅನೇಕ ಬಾರಿ ಬೋನಿಟ್ಟರು ಚಿರತೆ ಸೆರೆ ಸಿಕ್ಕಿಲ್ಲ. ಈ ಬಾರಿಯ ಕಾರ್ಯಾಚರಣೆ ಯಶಸ್ವಿಯಾಗಬೇಕೆಂದು ಒತ್ತಾಯಿಸುವ ಮೂಲಕ ಪತ್ರಿಕೆಯೊಂದಿಗೆ ತಮ್ಮ ಅಳಲು ತೋಡಿಕೊಂಡಿದ್ದಾರೆ.

ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಶಿವಯೋಗಿ ಅವರು ಮಾತನಾಡಿ, ಚಟ್ನಹಳ್ಳಿಯಲ್ಲಿ ಇಟ್ಟಿದ್ದ ಚಿರತೆ ಹಿಡಿಯುವ ಬೋನನ್ನು ಇಲ್ಲಿ ಇಂದು ಇಟ್ಟು ಕಾರ್ಯಾಚರಣೆಗೆ ಮುಂದಾಗಿದ್ದು, ಇದು ಯಶಸ್ವಿಯಾಗಲು ನಾಯಿಯೊಂದನ್ನು ಬಳಸಲಾಗಿದೆ ಎಂದರು.

ನಾಲ್ಕು ಬೋನುಗಳಲ್ಲಿ ಎರಡು ಬೋನ್‌ಗಳನ್ನು ಶಿವಮೊಗ್ಗಕ್ಕೆ ಕಳಿಸಲಾಗಿದೆ ಮತ್ತು ಒಂದು ಇದೀಗ ಪಲವನಹಳ್ಳಿ ಗ್ರಾಮದಲ್ಲಿ ಇಟ್ಟಿದ್ದೇವೆ. ಚಟ್ನಹಳ್ಳಿಯಲ್ಲಿ ಇಟ್ಟಿದ್ದ ಬೋನನ್ನು ಇಲ್ಲಿರಿಸಲಾಗಿದೆ.

ತಾಲ್ಲೂಕಿನಲ್ಲಿ ಇತ್ತೀಚೆಗೆ ಮಂಗನ ಹಾಗು ಚಿರತೆ ಮತ್ತು ಆನೆ ಹಿಡಿಯುವಲ್ಲಿ ಅನೇಕ ಸಮಸ್ಯೆಗಳನ್ನು ಸಿಬ್ಬಂದಿಗಳು ಎದುರಿಸಿದ್ದೇವೆ ಎಂದರು. ಹೆಜ್ಜೆ ಗುರುತಿನ ಮೂಲಕ ಆರು ವರ್ಷದ ಚಿರತೆ ಎಂದು ತಿಳಿಯಬಹುದಾಗಿದೆ ಎಂದು ವಿವರಿಸಿದರು.

ಗಸ್ತು ಅರಣ್ಯ ಪಾಲಕ ಪ್ರಭಾಕರ್, ಸಿಬ್ಬಂದಿಗಳಾದ ಬಿ. ಅರುಣ್, ಚನ್ನಪ್ಪ, ಅರಬಗಟ್ಟೆ ಅರುಣ ಇನ್ನಿತರರಿದ್ದರು.

## ಮಲ್ಲಿಗೇನಹಳ್ಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತನಿಗೆ ಚೂರಿ ಇರಿತ



ನ್ಯಾಮತಿ, ಮೇ 15- ಚುನಾವಣೆ ನಡೆದ ಬಳಿಕ ಇದೀಗ ಹೊನ್ನಾಳಿ ಕ್ಷೇತ್ರದಲ್ಲಿ ಕಾಂಗ್ರೆಸ್, ಬಿಜೆಪಿ ಕಾರ್ಯಕರ್ತರ ಕಿತ್ತಾಟ ಶುರುವಾಗಿದ್ದು, ಈ ಸಂದರ್ಭ ಕಾಂಗ್ರೆಸ್ ಕಾರ್ಯಕರ್ತರೊಬ್ಬರಿಗೆ ಚಾಕು ಇರಿಯಲಾಗಿದೆ.

ಸದ್ಯ ಗಾಯಾಳುವನ್ನು ಮಧು (24) ಎಂದು ಗುರುತಿಸಲಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರವೀಣ್, ಪ್ರಕಾಶ್, ತೀರ್ಥಲಿಂಗ ಸೇರಿ ಕೆಲ ಬಿಜೆಪಿ ಕಾರ್ಯಕರ್ತರು ದಾಳಿ ನಡೆಸಿದ್ದಾರೆ ಎಂದು ಆರೋಪ ಹೊರಿಸಲಾಗಿದೆ.

ಈ ಘಟನೆ ನ್ಯಾಮತಿ ತಾಲ್ಲೂಕಿನ ಮಲ್ಲಿಗೇನಹಳ್ಳಿಯಲ್ಲಿ ನಡೆದಿದ್ದು, ಹೊನ್ನಾಳಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಶಾಂತನಗೌಡ ಗೆದ್ದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಪಟಾಕಿ ಹಚ್ಚಿದ ವಿಚಾರಕ್ಕೆ ಜಗಳ ಶುರುವಾಗಿತ್ತು. ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಬೆಂಬಲಿಗರು ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದ್ದು, ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನ್ಯಾಮತಿ ಪಟ್ಟಣದ ಸಮುದಾಯ ಆಸ್ಪತ್ರೆಗೆ ನೂತನ ಶಾಸಕ ಡಿ.ಜಿ.ಶಾಂತನಗೌಡರ ಸುಪುತ್ರ ಪ್ರದೀಪ್‌ಗೌಡರ, ಸುರೇಂದ್ರಗೌಡರ ಪತ್ನಿಯರು ನ್ಯಾಮತಿ ಪಟ್ಟಣದ ಸಮುದಾಯ ಆಸ್ಪತ್ರೆಗೆ ಭೇಟಿ ನೀಡಿ ಕಾಂಗ್ರೆಸ್ ಕಾರ್ಯಕರ್ತ ಮಧು ಆರೋಗ್ಯವನ್ನು ವಿಚಾರಿಸಿದರು.

## ಧನಕರ್, ರಿಜಿಜು ವಿರುದ್ಧ ಕ್ರಮಕ್ಕೆ ಸುಪ್ರೀಂ ನಕಾರ

ನವದೆಹಲಿ, ಮೇ 15 - ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಹಾಗೂ ಕೇಂದ್ರ ಕಾನೂನು ಸಚಿವ ಕಿರಣ್ ರಿಜುಜು ಅವರು ನ್ಯಾಯಾಂಗದ ಕುರಿತು ಹೇಳಿಕೆ ನೀಡಿರುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂಬ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಬಾಂಬೆ ಹೈಕೋರ್ಟ್‌ನಲ್ಲಿ ಈ ಬಗ್ಗೆ ದಾಖಲಾಗಿದ್ದ ಅರ್ಜಿಯನ್ನು ತಿರಸ್ಕರಿಸಲಾಗಿತ್ತು. ಹೈಕೋರ್ಟ್ ನಿರ್ಧಾರ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಹೈಕೋರ್ಟ್ ಅರ್ಜಿ ತಳ್ಳಿ ಹಾಕಿರುವುದು ಸರಿಯಾಗಿದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಧನಕರ್ ಹಾಗೂ ರಿಜಿಜು ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಬಾಂಬೆ ವಕೀಲರ ಒಕ್ಕೂಟ ಅರ್ಜಿ ದಾಖಲಿಸಿತ್ತು. ರಿಜಿಜು ಅವರು ಕೊಲೀಜಿಯಂ ವ್ಯವಸ್ಥೆ ಬಗ್ಗೆ ಆಕ್ಷೇಪಿಸಿದ್ದರು. ಧನಕರ್ ಅವರು ಸಂವಿಧಾನದ ಮೂಲ ಸ್ವರೂಪದ ಕುರಿತು ಸುಪ್ರೀಂ ಕೋರ್ಟ್ ನೀಡಿದ್ದ ಕೇಶವಾನಂದ ಭಾರತಿ ಪ್ರಕರಣದ ತೀರ್ಪನ್ನು ಟೀಕಿಸಿದ್ದರು.


### ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ವಾಸಿ
**ಶ್ರೀ ಮುದೇಗೌಡ್ರು ಕೊಟ್ರೇಶಪ್ಪ ಮತ್ತು ಸಹೋದರರು**
ಮಾಡುವ ವಿಜ್ಞಾಪನೆಗಳು.
ದಿನಾಂಕ 8.5.2023ನೇ ಸೋಮವಾರ ಬೆಳಗಿನ ಜಾವ 12.30ಕ್ಕೆ ನಮ್ಮ ಪೂಜ್ಯ ಅಣ್ಣನವರಾದ
**ಶ್ರೀ ಮುದೇಗೌಡ್ರು ಬಸವನಗೌಡ**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆ**ಯನ್ನು
ದಿನಾಂಕ 16.5.2023ನೇ ಮಂಗಳವಾರ ಬೆಳಿಗ್ಗೆ 10.30ಕ್ಕೆ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಮುದಾಯ ಭವನ ಈಶ್ವರ ಪಾರ್ವತಿ ಗಣಪತಿ ದೇವಸ್ಥಾನ, ವಿದ್ಯಾನಗರ, 3ನೇ ಬಸ್ ಸ್ಟಾಪ್, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಎಂ.ಬಿ. ಯಶೋಧ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಮುದೇಗೌಡ್ರು ವಂಶಸ್ಥರು ಹಾಗೂ ಬಂಧು-ಮಿತ್ರರು.
ಮೊಬೈಲ್ : 95917 32293, 98440 71199



### ಭಾವಪೂರ್ಣ ಶ್ರದ್ಧಾಂಜಲಿ



ನಮ್ಮ ದೇವಸ್ಥಾನ ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿಗಳಾದ
**ಶ್ರೀ ಜೆ.ಎಸ್. ಹೊನ್ನಪ್ಪ**
ಅವರು, ದಿನಾಂಕ 12-5-2023ರಂದು ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗು ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ದಯಪಾಲಿಸಲೆಂದು ಶ್ರೀ ಚೌಡೇಶ್ವರಿ ದೇವಿಯಲ್ಲಿ ಪ್ರಾರ್ಥಿಸುತ್ತೇವೆ.
**ಅಧ್ಯಕ್ಷರು ಮತ್ತು ಪದಾಧಿಕಾರಿಗಳು**
**ಶ್ರೀ ಚೌಡೇಶ್ವರಿ ದೇವಿ ದೇವಸ್ಥಾನ**
ವಿನೋಬನಗರ 1ನೇ ಮುಖ್ಯರಸ್ತೆ ದಾವಣಗೆರೆ.



### ಬಾಡದ ಬಿ.ಕೆ ಮಹೇಶ್ವರಪ್ಪ ನಿಧನ



ದಾವಣಗೆರೆ ತಾಲ್ಲೂಕು ಬಾಡ ಗ್ರಾಮದ ಎಂಸಿಸಿ ಬಡಾವಣೆ ಬಿ ಬ್ಲಾಕ್ ವಾಸಿ ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್
**ಬಾಡದ ಬಿ.ಕೆ ಮಹೇಶ್ವರಪ್ಪ**
ಇವರು ದಿನಾಂಕ 15.5.2023ರ ಸೋಮವಾರ ಸಂಜೆ 4.20 ಕ್ಕೆ ನಿಧನಾರದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 94 ವರ್ಷ ವಯಸ್ಸಾಗಿತ್ತು. ಪತ್ನಿ, ಸೊಸೆ, ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಿನಾಂಕ 16.5.2023ರ ಬೆಳಿಗ್ಗೆ ನಗರದ ಎಂ.ಸಿ.ಸಿ. 'ಬಿ' ಬ್ಲಾಕ್, ಡೆಂಟಲ್ ಕಾಲೇಜ್ ರಸ್ತೆಯ ನಿವಾಸದಲ್ಲಿ ಬೆಳಿಗ್ಗೆ 11 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಅಂತ್ಯಕ್ರಿಯೆಯನ್ನು ಮಧ್ಯಾಹ್ನ 1 ಗಂಟೆಗೆ ದಾವಣಗೆರೆ ತಾಲ್ಲೂಕು ಬಾಡ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆವರಿಸಲಾಗುವುದು.
ಮೊ : 94804 47107, 98450 40546



### ಹರಿಹರದ ಗಣಪತಿರಾವ್ ಖಟಾವ್ಕರ್ ನಿಧನ



ಹರಿಹರ ನಗರದ ಹಂಸಾಗರ್ ಕಾಂಪೌಂಡ್ ನಿವಾಸಿಯಾದ
**ಶ್ರೀ ಗಣಪತಿರಾವ್ ಖಟಾವ್ಕರ್**
ಅವರು ದಿನಾಂಕ 14.05.2023 ಭಾನುವಾರ ಮಧ್ಯಾಹ್ನ 1.05 ಕ್ಕೆ ದೈವಾಧೀನರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 74 ವರ್ಷ ವಯಸ್ಸಾಗಿತ್ತು.
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.05.2023 ನೇ ಮಂಗಳವಾರ ಬೆಳಿಗ್ಗೆ 11.30 ಗಂಟೆಗೆ ಹರಿಹರದ ದಾಲ್ಮಿಯಾ ವಿಶ್ರಾಮ್ ಘಾಟ್ ನಲ್ಲಿ ನೆರವೇರಿಸಲಾಗುವುದು.
ದುಃಖತಪ್ತರು : ಶ್ರೀಮತಿ ಗೀತಾ ಗಣಪತಿರಾವ್ ಖಟಾವ್ಕರ್ ಮತ್ತು ಮಕ್ಕಳು ಹಾಗೂ ಪ್ರಭಾಕರ್ ಖಟಾವ್ಕರ್ ಮತ್ತು ಸಹೋದರರು, ಸಹೋದರಿಯರು, ಅಳಿಯಂದಿರು ಹಾಗೂ ಬಂಧು ಮಿತ್ರರು.


## ಹರಿಹರ ಕೊಲೆ ಪ್ರಕರಣ: ಇಬ್ಬರ ಬಂಧನ

ದಾವಣಗೆರೆ, ಮೇ 15- ಹರಿಹರದಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ಭಾಗಿಯಾದ ಇಬ್ಬರು ಆರೋಪಿಗಳನ್ನು ಪೊಲೀಸರು ಪತ್ತೆ ಹೆಚ್ಚಿ ವಶಕ್ಕೆ ಪಡೆದಿದ್ದಾರೆ.

ಹರಿಹರ ನಗರದ ಹೊಸ ಭರಂಪುರದ ರಾಜು (25) ಹಾಗೂ ಮಾರುತಿ (24) ಬಂಧಿತರು.

ಮನೆ ಪಾಲು ಮಾಡುವ ವಿಚಾರದಲ್ಲಿ ಮನಸ್ತಾಪವಿದ್ದಿದ್ದರಿಂದ ನನ್ನ ಪತಿಯ ತಂದೆಯ ಎರಡನೇ ಹೆಂಡತಿ ಮಕ್ಕಳಾದ ರಾಜು ಹಾಗೂ ಮಾರುತಿ ಅವರು ನನ್ನ ಪತಿಯ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿದ್ದಾರೆ ಎಂದು ಮೃತ ಕುಮಾರನ ಪತ್ನಿ ಹರಿಹರ ಠಾಣೆಯಲ್ಲಿ ದೂರು ದಾಖಲಿಸಿದ್ದರು.

## ಇಂಪೀರಿಯಲ್ ಪಬ್ಲಿಕ್ ಶಾಲೆಗೆ ಶೇ. 100 ಫಲಿತಾಂಶ

ದಾವಣಗೆರೆ, ಮೇ 15- ನಗರದ ಇಂಪೀರಿಯಲ್ ಪಬ್ಲಿಕ್ ಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 100 ರಷ್ಟು ಫಲಿತಾಂಶ ಲಭಿಸಿದೆ ಎಂದು ಸಂಸ್ಥೆಯ ಅಧ್ಯಕ್ಷ ಕೆ.ಎನ್. ಓಂಕಾರಪ್ಪ ತಿಳಿಸಿದ್ದಾರೆ.

# ಚಾಕುವಿನಿಂದ ಚುಚ್ಚಿ ಅಣ್ಣನ ಕೊಲೆ



### ಹರಿಹರ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆದ ಕೃತ್ಯ

ಹರಿಹರ, ಮೇ 15 - ಆಸ್ತಿ ವಿಚಾರದಲ್ಲಿ ತಮ್ಮನೇ ಅಣ್ಣನನ್ನು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿರುವ ಘಟನೆ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆದಿದೆ.

ಪ್ರಶಾಂತ್ ನಗರದ ನಿವಾಸಿ ಕೆ.ಜಿ. ಕುಮಾರ್ ಕೊಲೆಗೀಡಾಗಿ ಮೃತಪಟ್ಟ ವ್ಯಕ್ತಿ. ಗುಡ್ಡಪ್ಪ ಎಂಬುವರಿಗೆ ಇಬ್ಬರು ಪತ್ನಿಯರು. ರಾಜು ಹಾಗೂ ಮಾರುತಿ ಎರಡನೇ ಪತ್ನಿ ರತ್ನಮ್ಮನ ಮಕ್ಕಳು. ಕುಮಾರ್ ಮೊದಲನೇ ಪತ್ನಿ ಲಕ್ಷ್ಮಮ್ಮನ ಕೊನೆಯ ಮಗ. ಇವರ ನಡುವಿನ ಆಸ್ತಿ ವಿವಾದ ನ್ಯಾಯಾಲಯದ ಮೆಟ್ಟಿಲೇರಿತ್ತು. ಇವರ ಮಧ್ಯೆ ಪದೇ ಪದೇ ಸಣ್ಣಪುಟ್ಟ ಜಗಳ ನಡೆಯುತ್ತಿದ್ದವು.

ಕುಮಾರ್ ಅವರು ದಾವಣಗೆರೆಯಿಂದ ಹರಿಹರದಲ್ಲಿರುವ ತಮ್ಮ ಮನೆಗೆ ಬೈಕ್‌ನಲ್ಲಿ ತೆರಳುವ ವೇಳೆ ಪ್ರಶಾಂತ್ ನಗರದ ಬಳಿ ರಾಜು ಹಾಗೂ ಮಾರುತಿ ಹಲ್ಲೆ ನಡೆಸಿದ್ದಾರೆ. ನಂತರ ಅವರನ್ನು ಹರಿಹರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಯಿತು. ನಂತರ ಆಸ್ಪತ್ರೆಗೆ ಬಂದ ರಾಜು ಹಾಗೂ ಮಾರುತಿ ಮತ್ತೆ ಹಲ್ಲೆ ಮಾಡಿದ್ದಾರೆ. ರಾಜು ಚಾಕುವಿನಿಂದ ಕುತ್ತಿಗೆಯ ಭಾಗಕ್ಕೆ ಇರಿದಿದ್ದಾನೆ ಎಂದು ಕುಮಾರ್ ಪತ್ನಿ ಎಸ್. ಲಕ್ಷ್ಮಿ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ತಕ್ಷಣವೇ ಪ್ರಾಥಮಿಕ ಚಿಕಿತ್ಸೆ ನೀಡಿದ ವೈದ್ಯರು, ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಸಿ.ಜಿ. ಆಸ್ಪತ್ರೆಗೆ ರವಾನಿಸಿದರು. ಆದರೆ, ಆಸ್ಪತ್ರೆಗೆ ತೆರಳುವ ಮಾರ್ಗದಲ್ಲೇ ಕುಮಾರ್ ಸಾವನ್ನಪ್ಪಿದ್ದಾನೆ. ಆಸ್ಪತ್ರೆಯಲ್ಲಿ ಕುಮಾರ್ ಜೊತೆಗಿದ್ದ ಸಂಬಂಧಿ ಪಕ್ಕೀರಪ್ಪ ಮೇಲೂ ಹಲ್ಲೆ ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಘಟನೆಯ ನಂತರ ಹರಿಹರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ರಾಜು ಹಾಗೂ ಮಾರುತಿ ಇಬ್ಬರನ್ನೂ ಬಂಧಿಸಿದ್ದಾರೆ.

ದಾವಣಗೆರೆ ಅಡಿಷನಲ್ ಎಸ್ಪಿ ರಾಮಗೊಂಡ ಬಸರಗಿ, ದಾವಣಗೆರೆ ಉಪ ವಿಭಾಗದ ಅಧೀಕ್ಷಕರಾದ ಕನ್ನಿಕಾ ಸಿಕ್ರಿವಾಲ್, ನಗರ ಠಾಣೆ ಇನ್‌ಸ್ಪೆಕ್ಟರ್ ದೇವಾನಂದ್, ಪೊಲೀಸ್ ಸಿಬ್ಬಂದಿಗಳು ಘಟನಾ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.


### ಜೆ. ವಿರೂಪಾಕ್ಷಪ್ಪ ನಿಧನ



ದಾವಣಗೆರೆ ನಿಜಲಿಂಗಪ್ಪ ಲೇಔಟ್ ಬಕ್ಕೇಶ್ವರ ಚೌಟ್ರಿ ಹಿಂಭಾಗದ ಹತ್ತಿರದ ವಾಸಿ ಅಕ್ಕಿ ವ್ಯಾಪಾರಿಗಳಾದ
**ಜೆ. ವಿರೂಪಾಕ್ಷಪ್ಪ**
ಇವರು ದಿನಾಂಕ 15.5.2023ರ ಸೋಮವಾರ ರಾತ್ರಿ 11.50 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 55 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುತ್ತಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.5.2023ರ ಮಂಗಳವಾರ ಮಧ್ಯಾಹ್ನ 2.30ಕ್ಕೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗದವರು
ಮೊ : 63606 58714, 93539 93586


## ಹರಿಹರದಲ್ಲಿ ಇಂದು ಬಿಜೆಪಿ ವಿಜಯೋತ್ಸವ

ನೂತನ ಶಾಸಕರಾಗಿ ಬಿ.ಪಿ. ಹರೀಶ್ ವಿಜಯ ಸಾಧಿಸಿರುವುದಕ್ಕೆ ಬಿಜೆಪಿ ನಗರ ಮತ್ತು ಗ್ರಾಮಾಂತರ ಘಟಕದ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಯಿಂದ ವಿಜಯೋತ್ಸವ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್ ತಿಳಿಸಿದ್ದಾರೆ.

ಗ್ರಾಮದೇವತೆ ದೇವಸ್ಥಾನದಿಂದ ಪ್ರಾರಂಭಿಸಿ ರಾಣಿ ಚನ್ನಮ್ಮ ಸರ್ಕಲ್, ಶಿವಮೊಗ್ಗ ವೃತ್ತದ ಮೂಲಕ ಸಿದ್ದೇಶ್ವರ ಪ್ಯಾಲೇಸ್‌ವರೆಗೆ ವಿಜಯೋತ್ಸವ ಮೆರವಣಿಗೆ ನಡೆಯಲಿದೆ.

ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಬಿಜೆಪಿ ಜಿಲ್ಲಾ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಮಾಜಿ ಶಾಸಕ ಪ್ರೊ.ಲಿಂಗಣ್ಣ, ಎನ್.ಇ. ಜೀವನ್ ಮೂರ್ತಿ, ಚಂದ್ರಶೇಖರ್ ಪೂಜಾರ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ಮೆರವಣಿಗೆ ನಂತರ ಸಿದ್ದೇಶ್ವರ ಪ್ಯಾಲೇಸ್‌ನಲ್ಲಿ ಕಾರ್ಯಕರ್ತರಿಗೆ ಅಭಿನಂದನಾ ಸಭೆಯನ್ನು ಏರ್ಪಡಿಸಲಾಗಿದೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಬಗೆಹರಿಯದ ಸಿಎಂ ಗಾದಿ ಬಿಕ್ಕಟ್ಟು

## ಸಿದ್ದರಾಮಯ್ಯ ಪರ ಮುಖಂಡರ ಒಲವು, ಬಹಳಷ್ಟು ಶಾಸಕರ ತಟಸ್ಥ ನಿಲುವು

ಬೆಂಗಳೂರು, ಮೇ 15 - ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಮ್ಮ ಪಟ್ಟು ಸಡಿಲಿಸಲು ಮುಂದಾಗದ ಕಾರಣ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಬಿಕ್ಕಟ್ಟಾಗಿದೆ.



ಕರ್ನಾಟಕದಲ್ಲಿ ಸ್ಪಷ್ಟ ಬಹುಮತದಿಂದ ಪಕ್ಷ ಅಧಿಕಾರ ಹಿಡಿದಿದ್ದರೂ, ನಾಯಕನ ಆಯ್ಕೆ ವಿಚಾರದಲ್ಲಿ ವರಿಷ್ಠರು ದುಡುಕು ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ.

ಮುಖ್ಯಮಂತ್ರಿ ಆಕಾಂಕ್ಷಿಯಾಗಿರುವ ಈ ಉಭಯ ನಾಯಕರ ಮನವೊಲಿಸಿ, ಒಮ್ಮತದ ಆಯ್ಕೆ ಮಾಡಲು ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರನ್ನು ದೆಹಲಿಗೆ ಬರುವಂತೆ ವರಿಷ್ಠರು ಆಹ್ವಾನಿಸಿದ್ದಾರೆ.

ವರಿಷ್ಠರ ಆಹ್ವಾನದ ಮೇರೆಗೆ ಸಿದ್ದರಾಮಯ್ಯ ದೆಹಲಿ ತಲುಪಿದ್ದಾರೆ. ಶಿವಕುಮಾರ್ ಮಾತ್ರ ತಾವು ದೆಹಲಿಗೆ ಹೋಗುವುದಿಲ್ಲ ಎಂದು ಪಟ್ಟು ಹಿಡಿದಿದ್ದು, ಕೊನೆಗೆ ತಮ್ಮ ಸಹೋದರ ಸಂಸದ ಸುರೇಶ್ ಅವರನ್ನು ಕಳುಹಿಸಿಕೊಟ್ಟಿದ್ದಾರೆ.

ಐದು ವರ್ಷಗಳ ಆಡಳಿತಾವಧಿಯನ್ನು ಹಂಚಿಕೊಂಡು ಆಡಳಿತ ನಡೆಸಲು ಉಭಯ ನಾಯಕರು ಸಮ್ಮತಿಸಿದ್ದರೂ, ಯಾರು ಮೊದಲು ಎಂಬ ವಿಷಯದಲ್ಲಿ ತಮ್ಮ ಪಟ್ಟನ್ನು ಬಿಟ್ಟುಕೊಡುತ್ತಿಲ್ಲ. ಇದೇ ವರಿಷ್ಠರಿಗೆ ತಲೆನೋವಾಗಿರುವುದು.

ದೆಹಲಿಯ ವರಿಷ್ಠರು ಪಕ್ಷದ ಶಾಸಕರ ಅಭಿಪ್ರಾಯ ಸಂಗ್ರಹ ಮಾಡಿ, ಪೂರ್ಣಗೊಂಡ ನಂತರ ತಮ್ಮ ಸಹೋದರ ಸುರೇಶ್ ಜೊತೆಗೂಡಿ ಶಾಂಗ್ರಿಲಾ ಹೋಟೆಲ್‌ನಲ್ಲಿ ತಂಗಿರುವ ರಾಜ್ಯದ ಉಸ್ತುವಾರಿ ಹೊಣೆಹೊತ್ತ ರಣದೀಪ್‌ಸಿಂಗ್ ಸುರ್ಜೇವಾಲಾ ಹಾಗೂ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಿ, ಮುಖ್ಯಮಂತ್ರಿ ಸ್ಥಾನದ ಹಕ್ಕಿಗಾಗಿ ಒತ್ತಾಯಿಸಿದ್ದಾರೆ.

ಸಂಕಷ್ಟದಲ್ಲಿದ್ದ ಪಕ್ಷವನ್ನು ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ಕಟ್ಟಿ ಬೆಳೆಸಿ, ಪಕ್ಷವನ್ನು ಅಧಿಕಾರಕ್ಕೆ ತಂದಿದ್ದೇನೆ. ನನ್ನನ್ನು ಮುಖ್ಯಮಂತ್ರಿ ಮಾಡಬೇಕೆಂದೇ ಅಲ್ಪಸಂಖ್ಯಾತರು, ಒಕ್ಕಲಿಗರು, ಪರಿಶಿಷ್ಟರು ಹಾಗೂ ಉತ್ತರ ಕರ್ನಾಟಕ ಭಾಗದಲ್ಲಿ ಲಿಂಗಾಯತ ಸಮುದಾಯ ಪಕ್ಷಕ್ಕೆ ಸಂಪೂರ್ಣ ಬೆಂಬಲ ನೀಡಿದ್ದರಿಂದ ನಾವು 135 ಸ್ಥಾನ ಗೆದ್ದಿದ್ದೇವೆ ಎಂದವರು ಹೇಳಿರುವುದಾಗಿ ಮೂಲಗಳು ತಿಳಿಸಿವೆ.

ಹಗಲು, ರಾತ್ರಿ ಎನ್ನದೇ ಪಕ್ಷಕ್ಕಾಗಿ ದುಡಿದಿದ್ದೇನೆ. ಇದನ್ನು ನೀವು ಸಮೀಪದಲ್ಲೇ ಕಂಡಿದ್ದೀರಿ. ನಾನು ದೆಹಲಿಗೆ ಹೋಗಿ ಮುಖ್ಯಮಂತ್ರಿ ಸ್ಥಾನ ಕೊಡಿ ಎಂದು ಕೇಳುವುದಿಲ್ಲ. ನೀವೇ ನನಗೆ ಅಧಿಕಾರ ಕೊಡಬೇಕು ಎಂದವರು ಒತ್ತಾಯಿಸಿದ್ದಾರೆ. ನನಗೆ ಕೊಡಲು ನಿಮಗೆ ಇಷ್ಟ ಇಲ್ಲ ಎಂದರೆ ನಾನು ವಿಧಾನಸಭಾ ಸದಸ್ಯತ್ವಕ್ಕೆ ಮತ್ತು ರಾಜ್ಯಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ, ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತನಂತೆ ನಿಷ್ಠನಾಗಿರುತ್ತೇನೆ ಎಂದು ಹೇಳಿದ್ದಾರೆ.

ರಾಜಕೀಯದಿಂದ ದೂರ ಸರಿದು, ನನ್ನ ಬಿಸಿನೆಸ್ ನೋಡಿಕೊಂಡು ಆರಾಮಾಗಿರುತ್ತೇನೆ. ಇನ್ನು ಉಳಿದ ವಿಚಾರವಾಗಿ ನಾನು ಏನನ್ನೂ ಹೇಳುವುದಿಲ್ಲ ಎಂದು ಕಡ್ಡಿ ಮುರಿದಂತೆ ಹೇಳಿ ಹೊರ ಬಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವೀಕ್ಷಕರ ಮುಂದೆ ಪಕ್ಷದ ಕೆಲವು ಹಿರಿಯ ನಾಯಕರು ಈಗ ಸಿದ್ದರಾಮಯ್ಯನವರ ಪರ ನಿಂತಿರುವುದರಿಂದ ಬೇಸತ್ತ ಶಿವಕುಮಾರ್ ಇಂತಹ ನಿರ್ಧಾರ ಕೈಗೊಂಡರೆಂದು ಹೇಳಲಾಗಿದೆ.

ವೀಕ್ಷಕರು ಶಾಂಗ್ರಿಲಾ ಹೋಟೇಲ್‌ನಲ್ಲಿ ಶಾಸಕರ ಅಭಿಪ್ರಾಯ ಸಂದರ್ಭದಲ್ಲಿ ಬಹುತೇಕರು ತಟಸ್ಥವಾಗಿ ಉಳಿದು, ನಾಯಕನ ಆಯ್ಕೆಯನ್ನು ವರಿಷ್ಠರಿಗೆ ಬಿಟ್ಟಿದ್ದಾರೆ.

ಉಳಿದವರಲ್ಲಿ ಕೆಲವರು ಶಿವಕುಮಾರ್ ಪರ ವಕಾಲತ್ತು ವಹಿಸಿದ್ದರೆ, ಇನ್ನೂ ಕೆಲ ಶಾಸಕರು ಸಿದ್ದರಾಮಯ್ಯನವರೇ ಮುಖ್ಯಮಂತ್ರಿ ಏತಕ್ಕೆ ಆಗಬೇಕೆಂದು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ.

ಶಿವಕುಮಾರ್‌ಗಿಂತ ಸಿದ್ದರಾಮಯ್ಯನ ಪರ ವಕಾಲತ್ತು ವಹಿಸಿದ ಶಾಸಕರೇ ಹೆಚ್ಚು. ಅದರಲ್ಲಿ ಆರ್.ವಿ. ದೇಶಪಾಂಡೆ, ಕೆ.ಜೆ.ಜಾರ್ಜ್, ಕೆ.ಎನ್. ರಾಜಣ್ಣ, ಬಸವರಾಜ ರಾಯರೆಡ್ಡಿ, ಜಮೀರ್ ಅಹಮದ್‌ಖಾನ್, ಎಂ.ಬಿ. ಪಾಟೀಲ್ ಸೇರಿದಂತೆ ಹಿರಿಯ ನಾಯಕರಿದ್ದಾರೆ.

ಹಿರಿಯರು ಸಿದ್ದು ಪರ ವಾದ ಮಾಡಿದ ನಂತರ ಶಿವಕುಮಾರ್ ದೆಹಲಿಗೆ ಹೋಗುವ ನಿರ್ಧಾರ ಕೈಬಿಟ್ಟು, ಇಲ್ಲೇ ತಮ್ಮ ನಿಲುವನ್ನು ಹೇಳಿ, ಪೂಜೆ ಪುನಸ್ಕಾರಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಈ ಮಧ್ಯೆ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಕುರಿತಂತೆ ದೆಹಲಿಯಿಂದ ಬಂದಿದ್ದ ವೀಕ್ಷಕರು ಇಂದು ಮುಂಜಾನೆಯವರೆಗೂ ಶಾಸಕರ ಜೊತೆ ಸಮಾಲೋಚನೆ ನಡೆಸಿ, ಅವರ ಅಭಿಪ್ರಾಯ ಪಡೆದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ತಲುಪಿಸಿದ್ದಾರೆ.

ಈ ವರದಿ ಆಧಾರದ ಮೇಲೆ ಖರ್ಗೆ ಅವರು ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರೊಟ್ಟಿಗೆ ಸಮಾಲೋಚನೆ ಮಾಡಿದ್ದಾರೆ.

ಸಮಾಲೋಚನೆಯ ನಂತರವೇ ಸಿದ್ದರಾಮಯ್ಯ ಹಾಗೂ ಶಿವಕುಮಾರ್‌ಗೆ ದೆಹಲಿಗೆ ಬರುವಂತೆ ಬುಲಾವ್ ಮಾಡಲಾಯಿತು.

ಈ ಮಧ್ಯೆ ಹೇಳಿಕೆ ನೀಡಿರುವ ಶಿವಕುಮಾರ್, ಸಿಎಲ್‌ಪಿ ಸಭೆಯಲ್ಲಿ ಮುಖ್ಯಮಂತ್ರಿ ನಿರ್ಧಾರವನ್ನು ವರಿಷ್ಠರಿಗೆ ಬಿಡಲಾಗಿದೆ. ಅವರು ಈ ಬಗ್ಗೆ ತೀರ್ಮಾನ ಕೈಗೊಳ್ಳುತ್ತಾರೆ ಎಂದಿದ್ದಾರೆ. ನಮ್ಮ ಮನೆಯಲ್ಲಿ ಪೂಜೆ ಪುನಸ್ಕಾರ ಹಮ್ಮಿಕೊಂಡಿದ್ದು, ಹೀಗಾಗಿ ದೆಹಲಿಗೆ ಹೋಗುವ ಬಗ್ಗೆ ನಾನು ಇನ್ನು ತೀರ್ಮಾನ ಮಾಡಿಲ್ಲ ಎಂದಿದ್ದಾರೆ.

ನಿಮ್ಮ ಹುಟ್ಟು ಹಬ್ಬಕ್ಕೆ ದೆಹಲಿ ನಾಯಕರು ಉಡುಗೊರೆ ನೀಡುತ್ತಾರೆಯೇ? ಎಂಬ ಪ್ರಶ್ನೆಗೆ ರಾಜ್ಯದ ಜನ ನನ್ನ ಮೇಲೆ ವಿಶ್ವಾಸವಿಟ್ಟು, 135 ಸ್ಥಾನಗಳ ಬಹುದೊಡ್ಡ ಮತದಿಂದ ಗೆಲ್ಲಿಸಿದ್ದಾರೆ ಎಂದರು. ಇದಕ್ಕಿಂತ ಉಡುಗೊರೆ ನಿರೀಕ್ಷಿಸಲು ಸಾಧ್ಯವೇ. ಅಧಿಕಾರ ಇಲ್ಲದಿದ್ದರೂ, ಎಲ್ಲಾ ಕಿರುಕುಳ, ಸವಾಲುಗಳ ಜೊತೆ, ಡಬಲ್ ಇಂಜಿನ್ ಸರ್ಕಾರವನ್ನು ಎದುರಿಸಿ, ಪಕ್ಷ ಸಂಘಟನೆ ಮಾಡಿದ್ದೇನೆ ಎನ್ನುವ ಮೂಲಕ ನನಗೇ ಮುಖ್ಯಮಂತ್ರಿ ಸ್ಥಾನ ದೊರೆಯಬೇಕೆಂದು ಪರೋಕ್ಷವಾಗಿ ತಿಳಿಸಿದ್ದಾರೆ.

## ತೆಲಂಗಾಣದಲ್ಲಿ ಫಾಕ್ಸ್‌ಕಾನ್ ಘಟಕಕ್ಕೆ ಶಿಲಾನ್ಯಾಸ

**500 ದಶಲಕ್ಷ ಡಾಲರ್ ಹೂಡಿಕೆಗೆ ಕ್ರಮ**

ಹೈದರಾಬಾದ್, ಮೇ 15 - ತೆಲಂಗಾಣದಲ್ಲಿ ದೈತ್ಯ ಫಾಕ್ಸ್‌ಕಾನ್ ಕಂಪನಿಯ ನೂತನ ಎಲೆಕ್ಟ್ರಾನಿಕ್ಸ್ ಉಪಕರಣಗಳ ಘಟಕಕ್ಕೆ ಶಿಲಾನ್ಯಾಸ ನೆರವೇರಿಸಲಾಗಿದೆ. 500 ದಶಲಕ್ಷ ಡಾಲರ್ ಹೂಡಿಕೆಯ ಅಂಗವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಇಲ್ಲಿಗೆ ಸಮೀಪದ ಕೊಂಗರ ಕಲನ್ ಎಂಬಲ್ಲಿ ಘಟಕ ಸ್ಥಾಪಿಸಲಾಗಿದೆ. ತೈವಾನ್‌ನ ಫಾಕ್ಸ್‌ಕಾನ್ ಕಂಪನಿಯು ಜಾಗತಿಕವಾಗಿ ಉತ್ಪಾದನೆ ಹರಡಲು ಈ ಕ್ರಮ ತೆಗೆದುಕೊಂಡಿದೆ.

## ಹಳೆಯ ವಸ್ತುಗಳ ಮರು ಬಳಕೆ ಅಭಿಯಾನಕ್ಕೆ ಕೇಂದ್ರ ಸಚಿವರ ಚಾಲನೆ

ನವದೆಹಲಿ, ಮೇ 15 – ಬಟ್ಟೆ, ಬೂಟು, ಆಟಿಕೆ ಹಾಗೂ ಪುಸ್ತಕದ ರೀತಿಯ ಹಳೆ ವಸ್ತುಗಳ ವಿಲೇವಾರಿ ಹಾಗೂ ಮರು ಬಳಕೆ ಮಾಡುವ 'ಮೇರಿ ಲೈಫ್, ಮೇರಾ ಸ್ವಚ್ಛ ಶೆಹರ್' ಅಭಿಯಾನಕ್ಕೆ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಹರ್‌ದೀಪ್ ಸಿಂಗ್ ಪುರಿ ಚಾಲನೆ ನೀಡಿದ್ದಾರೆ.

ನಾಗರಿಕರು ನೀಡುವ ಹಳೆಯ ವಸ್ತುಗಳ ಮರು ಬಳಕೆ ಮಾಡುವ ಮೂಲಕ ತ್ಯಾಜ್ಯದಿಂದ ಸಂಪತ್ತು ಉತ್ಪಾದಿಸಲಾಗುವುದು. ಇದು ಸ್ವಚ್ಛ ಭಾರತ – ನಗರ 2ನೇ ಅಭಿಯಾನದ ಭಾಗವಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಈ ಅಭಿಯಾನವನ್ನು ದೇಶವ್ಯಾಪಿ ನಡೆಸಲಾಗುವುದು. ಮೂರು ವಾರಗಳ ಈ ಅಭಿಯಾನದಿಂದ ಮರು ಬಳಕೆಗೆ ಉತ್ತೇಜನ ಸಿಗಲಿದೆ ಎಂದು ಸಚಿವಾಲಯ ಹೇಳಿದೆ.


ಬಾಪೂಜಿ ವಿದ್ಯಾಸಂಸ್ಥೆ (ರಿ.)
ಫೋನ್: 08192 262528, 08192 262562
**ಬಾಪೂಜಿ ಪಾಲಿಟೆಕ್ನಿಕ್ ಶಾಬನೂರು, ದಾವಣಗೆರೆ**
ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ-04
(ಕರ್ನಾಟಕ ಸರ್ಕಾರದ ಮಾನ್ಯತೆ ಮತ್ತು ಎಐಸಿಟಿಇ ಅನುಮೋದನೆ ಪಡೆದಿದೆ)
**ಡಿಪ್ಲೋಮಾ ಇಂಜಿನಿಯರಿಂಗ್ ಪ್ರವೇಶ ಪ್ರಕಟಣೆ 2023-24**



2023-24ನೇ ಸಾಲಿಗೆ ಬಾಪೂಜಿ ಪಾಲಿಟೆಕ್ನಿಕ್‌ನ ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಕ್ಕಾಗಿ ಎಸ್.ಎಸ್.ಎಲ್.ಸಿ (ಅಥವಾ ತತ್ಸಮಾನ ವಿದ್ಯಾರ್ಹತೆ) ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರವೇಶವನ್ನು ಸರ್ಕಾರದ ನಿಯಮಾನುಸಾರ 'ಮೊದಲು ಬಂದವರಿಗೆ ಮೊದಲ ಆದ್ಯತೆ' ಮೇರೆಗೆ ಪ್ರವೇಶ ನೀಡಲಾಗುವುದು.
www.bpsdvg.com

**ಸೌಲಭ್ಯಗಳು / ವೈಶಿಷ್ಟ್ಯತೆಗಳು**
* ಅನುಭವಿ ಹಾಗೂ ನುರಿತ ಉಪನ್ಯಾಸಕರುಗಳು.
* ಅತ್ಯಾಧುನಿಕ ಪ್ರಯೋಗಾಲಯಗಳು ಮತ್ತು ತರಬೇತಿ
* ಥಿಯರಿ ಮತ್ತು ಪ್ರಾಯೋಗಿಕ ವಿಷಯಗಳಲ್ಲಿ ಶೇಕಡ 100 ರಷ್ಟು ಗುಣ ಮಟ್ಟದ ಬೋಧನೆ. * ಪ್ರತಿಷ್ಠಿತ ಕಂಪನಿಗಳು ಕ್ಯಾಂಪಸ್ ಸಂದರ್ಶನ ಏರ್ಪಡಿಸುತ್ತಿರುವುದು. * ವಿಶೇಷ ಉಪನ್ಯಾಸ, ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳು. * ಕಾರ್ಖಾನೆಗಳಿಗೆ ಮತ್ತು ಪ್ರಾಜೆಕ್ಟ್ ಸೈಟ್‌ಗಳಿಗೆ ಶೈಕ್ಷಣಿಕ ಪ್ರವಾಸ. * ಎಲ್ಲಾ ತರಗತಿಗಳಲ್ಲಿ ಹಾಗೂ ಪ್ರಯೋಗಾಲಯಗಳಲ್ಲಿ ಸಿಸಿಟಿವಿ ವ್ಯವಸ್ಥೆ.
* ಪ್ರಾಯೋಗಿಕ ತರಬೇತಿಗೆ ಹೆಚ್ಚಿನ ಉತ್ತೇಜನ
* ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಲ್ಲಿರುತ್ತದೆ.

**ಅನುದಾನರಹಿತ ಕೋರ್ಸ್‌ಗಳು**
(1) ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್(CS&E)
(2) ಟೆಕ್ಸ್‌ಟೈಲ್ ಟೆಕ್ನಾಲಜಿ (T.T)
(3) ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ (E&E)
(4) ಅಪೆರಲ್ ಡಿಸೈನ್ & ಫ್ಯಾಬ್ರಿಕೇಷನ್ ಟೆಕ್ನಾಲಜಿ – (ADFT) (ನಾನ್ ಟೆಕ್ನಿಕಲ್ )

**ಅನುದಾನಿತ ಕೋರ್ಸ್‌ಗಳು**
(5) ಸಿವಿಲ್ ಇಂಜಿನಿಯರಿಂಗ್ (CE)
(6) ಮೆಕ್ಯಾನಿಕಲ್ ಇಂಜಿನಿಯರಿಂಗ್ (ME)
(7) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ (E&C)

ದ್ವಿತೀಯ ಪಿಯುಸಿ (ವಿಜ್ಞಾನ) ಹಾಗೂ 2 ವರ್ಷದ ಐಟಿಐ ಪಾಸಾದ ಅಭ್ಯರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ ಡಿಪ್ಲೋಮಾ 2ನೇ ವರ್ಷಕ್ಕೆ ನೇರ ಪ್ರವೇಶಾವಕಾಶ ಇರುತ್ತದೆ.
ಪ್ರವೇಶಕ್ಕಾಗಿ ಅರ್ಜಿಗಳನ್ನು ಕಛೇರಿಯಿಂದ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಪ್ರಾಂಶುಪಾಲರನ್ನು ಸಂಪರ್ಕಿಸಲು ಕೋರಿದೆ.
ಡಾ|| ಶಾಮನೂರು ಶಿವಶಂಕರಪ್ಪ, ಗೌರವ ಕಾರ್ಯದರ್ಶಿಗಳು, ಬಾ.ವಿ.ಸಂ, ದಾವಣಗೆರೆ
ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್, ಜಂಟಿ ಕಾರ್ಯದರ್ಶಿಗಳು, ಬಾ.ವಿ.ಸಂ ದಾವಣಗೆರೆ
ಶ್ರೀ ಮೋಹನ್, ಪ್ರಾಂಶುಪಾಲರು, ಬಾಪೂಜಿ ಪಾಲಿಟೆಕ್ನಿಕ್, ದಾವಣಗೆರೆ. ಮೊ:9880060880


## ಸತತ 3ನೇ ತಿಂಗಳು ರಫ್ತು ಕುಸಿತ

ನವದೆಹಲಿ, ಮೇ 15 – ಸತತ ಮೂರನೇ ತಿಂಗಳು ರಫ್ತಿನಲ್ಲಿ ಕುಸಿತವಾಗಿದೆ. ಏಪ್ರಿಲ್ ತಿಂಗಳಲ್ಲಿ ರಫ್ತು ಮೌಲ್ಯ 34.66 ಶತಕೋಟಿ ಡಾಲರ್ ಆಗಿದೆ.

ಕಳೆದ ವರ್ಷ ಇದೇ ತಿಂಗಳಿಗೆ ಹೋಲಿಸಿದರೆ ರಫ್ತು ಶೇ.12.7ರಷ್ಟು ಇಳಿಕೆಯಾಗಿದೆ. ವಿನಿಮಯ ಕೊರತೆ ಸಹ ಕಡಿಮೆ ಆಗಿದ್ದು 15.24 ಶತಕೋಟಿ ಡಾಲರ್‌ಗಳಿಗೆ ಇಳಿದಿದೆ.

ಯುರೋಪ್ ಹಾಗೂ ಅಮೆರಿಕಗಳಲ್ಲಿ ಬೇಡಿಕೆ ಕಡಿಮೆಯಾಗಿರುವುದೇ ರಫ್ತು ಇಳಿಕೆಗೆ ಕಾರಣ. ಪರಿಸ್ಥಿತಿ ಸರಿ ಹೋಗಲು ಇನ್ನೂ ಕೆಲ ತಿಂಗಳು ಬೇಕಾಗಬಹುದು ಎಂದು ಅಂದಾಜಿಸಲಾಗಿದೆ.


CLEARING SALE
Jockey, Duke, Oxemberg, RamRaj
25 TO 40%
COLLECTIONS
MANZ SHOPPE
MCC B BLOCK, MAMAS JOINT ROAD, DVG



ಶಿವ || ಶ್ರೀ ಕುಂದೂರು ಆಂಜನೇಯ ಸ್ವಾಮಿ ಪ್ರಸನ್ನ || ಶಿವ
**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**
ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು, ಕತ್ತಲಗೆರೆ ಗ್ರಾಮದ ವಾಸಿ
ದಿ. ಕುಂದೂರು ರುದ್ರಪ್ಪ, ಮಾಜಿ ಶಾಸಕರು, ಚನ್ನಗಿರಿ ಕ್ಷೇತ್ರ ಇವರ ಪುತ್ರ
ಶ್ರೀ ಕುಂದೂರು ಬಸವರಾಜಪ್ಪ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 8.5.2023ನೇ ಸೋಮವಾರ ರಾತ್ರಿ 10.30ಕ್ಕೆ ನನ್ನ ಧರ್ಮಪತ್ನಿಯಾದ



**ಶರಣೆ ಕುಂದೂರು ರತ್ನಮ್ಮನವರು**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿ. 16.05.2023ನೇ ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ ಚನ್ನಗಿರಿ ತಾ. ಕತ್ತಲಗೆರೆ ಗ್ರಾಮದ ಶ್ರೀ ಗುರು ಗದ್ದಿಗೇಶ್ವರ ಸಮುದಾಯ ಭವನದಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀ ಕುಂದೂರು ಬಸವರಾಜಪ್ಪ ಮತ್ತು ಸಹೋದರರು, ಸಹೋದರಿಯರು, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಕುಂದೂರು ವಂಶಸ್ಥರು, ಕತ್ತಲಗೆರೆ, ಬಸೇಗಣ್ಣಿ ಬಂಧುಗಳು, ಹಾವೇರಿ ಹಾಗೂ ಗ್ರಾಮಸ್ಥರು ಮತ್ತು ಬಂಧು-ಮಿತ್ರರು
ಪ್ರೊ|| ಕೆ.ಬಿ. ರಾಜೇಶ್, ಶ್ರೀ ಆಂಜನೇಯ ಟ್ರೇಡರ್ಸ್, ಕತ್ತಲಗೆರೆ.
ಪ್ರೊ|| ಕೆ. ಬಿ. ಮಹೇಶ್, ಶ್ರೀ ಆಂಜನೇಯ ಫರ್ಟಿಲೈಸರ್ಸ್, ಕತ್ತಲಗೆರೆ.
ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಿ, ಮೃತರಿಗೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.



**RASHTROTTHANA VIDYA KENDRA, CBSE**
Opp ESI Hospital, Nittuvalli, Davanagere. Email: rpudvg@rvkcbsc.in



Distinction 33
100% Result
8th Consecutive Years
First Class 43

CLASS X CBSE RESULT 2022-23
The Unbeatable Legacy of Outstanding Result Continues....
Best Wishes from the Management, Principal and Staff
Hearty Congratulations
Admissions is in progress for the session 2023-24

Jyestra T.R 96% | Pratham G 95% | Pratheek S.H 94% | Govind G 93% | Sonu T.S 93% | Shashank T 92% | Vamshi S.K 91% | Akash R 90%
Keerthi S 89% | Gagan Deep 89% | Preetham D.V 89% | Sujal J.B 88% | Vindhya H.V 88% | Amulya N 87% | Rachana P.D 86% | Vikas N 86%
Avani T.P 86% | Sadhana R 85% | Divyashree S 85% | Nitya M 85% | Sathwika C 84% | Siri M.S 83% | Mithali H.B 83% | Pruthvi M.R 82%
Anjana D.J 82% | Dhanvi V.K 81% | Hitha C 81% | Rijul R Jain 81% | Champaram M 81% | Harsha B 81% | Apeksha K.T 81% | Yogesh S 80% | Devika T.B 80%

RASHTROTTHANA COMPOSITE PU COLLEGE
Saadhana Achievements 52 Seats in Medical
Tapas Achievements 81 Seats in IIT & NIT
Admission Open for I PUC
Courses offered PCMB & PCMCs
Integrated training for NEET / IIT-JEE + K-CET
Hostel Facility is Available Only for Girls
For Admission : 8792627879 / 8892533505 / 9902849981

# ಮೀಸಲಾತಿ ಬಚಾವೋದಿಂದ 68 ಕ್ಷೇತ್ರಗಳ ಮೇಲೆ ಪರಿಣಾಮ



ಹೊನ್ನಾಳಿ, ಮೇ 15- ರಾಜ್ಯ ಬಿಜೆಪಿ ಸರ್ಕಾರವು ಸಂವಿಧಾನದ ಆಶಯಗಳನ್ನು ದುರ್ಬಲಗೊಳಿಸಲು ನ್ಯಾ. ಸದಾಶಿವ ಆಯೋಗದ ವರದಿಯ ವಿಷಯಗಳಿಗೆ ಮುಂದಾಗಿದ್ದರಿಂದ ರಾಜ್ಯದ 68 ಕ್ಷೇತ್ರಗಳಲ್ಲಿ ಪರಿಣಾಮ ಬೀರುವಂತೆ ಸ್ವಾಭಿಮಾನಿ ಬಂಜಾರರು ಮುಂದಾಗಿರುವುದಾಗಿ ತಾಲ್ಲೂಕು ಬಂಜಾರ ಸಮಾಜದ ಮುಖಂಡ ಡಾ.ಈಶ್ವರನಾಯ್ಕ ಹೇಳಿದರು.

ಹೊನ್ನಾಳಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಸಮುದಾಯಗಳ ನಡುವೆ ಶಾಶ್ವತ ದ್ವೇಷದ ಪರಿಣಾಮ ಬೀರುವ ಪ್ರಯತ್ನಕ್ಕೆ ಸರ್ಕಾರ ಮುಂದಾಗಿತ್ತೆಂದರು.

ವಿಧಾನಸಭಾ ಚುನಾವಣೆಯ ಫಲಿತಾಂಶದಲ್ಲಿ ಬಿಜೆಪಿಗೆ ಹಿನ್ನಡೆಯಾಗು ವುದನ್ನು ಮರೆಮಾಚಲು ಒಳಮಿಸಲಾತಿಯ ದೊಡ್ಡ ಷಡ್ಯಂತರಕ್ಕೆ ಮುಂದಾಗಿತ್ತೆಂದರು ಹಾಗು ಸಮಾಜದ ಒತ್ತಾಸೆಯು ಸದಾಶಿವ ಆಯೋಗ ಯತಾವತ್ತಾಗಿ ಜಾರಿಗೆ ಮುಂದಾಗದಿರುವಂತೆ ಒತ್ತಾಯವಾಗಿದ್ದಿತು.

ದೇಶದ ಯಾವುದೇ ರಾಜ್ಯದಲ್ಲಿ ಒಳಮಿಸಲಾತಿ ಜಾರಿಗೊಳಿಸಿಲ್ಲ. ಕಾರಣ ಇದನ್ನು ಜಾರಿಗೊಳಿಸಲು ಸಂವಿಧಾನದಲ್ಲಿ ಅವಕಾಶಗಳಿಲ್ಲ ಎಂಬ ಸತ್ಯವು ಈ ಹಿಂದೆ ಆಂಧ್ರಪ್ರದೇಶಕ್ಕೆ ಸುಪ್ರೀಂ ಕೋರ್ಟ್ ಸ್ಪಷ್ಟ ತೀರ್ಪು ನೀಡಿದ್ದನ್ನು ಸ್ಮರಿಸಬಹುದಾಗಿದೆ ಎಂದರು.

ಈ ನಡುವೆ ಒಳ ಮೀಸಲಾತಿ ಜಾರಿಗೊಳಿಸಲು ಮುಂದಾಗುವುದಾದರೆ 7 ಜನರ ಸಂವಿಧಾನಿಕ ಪೀಠವನ್ನು ರಚಿಸಿ ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ ಪ್ರಯತ್ನಿಸಬಹುದಾಗಿದೆ ಎಂದರು. ಕೆಳ ಸಮುದಾಯದ ಮತ ಪಡೆಯಲು ವಸ್ತುನಿಷ್ಠ ಅಧ್ಯಯನವಿಲ್ಲದೆ ಅಸಂವಿಧಾನಿಕ ಹಾಗು ಅವೈಜ್ಞಾನಿಕವಾಗಿ ಮೀಸಲಾತಿ ವರ್ಗೀಕರಿಸುವುದು ಸಂವಿಧಾನ ಬಾಹಿರ ಮತ್ತು ಸುಪ್ರೀಂ ಕೋರ್ಟ್ ತೀರ್ಪಿನ ಉಲ್ಲಂಘನೆ ಯಾಗಿರುತ್ತದೆ ಎಂದರು.

ಬಿಜೆಪಿಯ ಈ ಧೋರಣೆ ಖಂಡಿಸಿ ಕರ್ನಾಟಕ ಮೀಸಲಾತಿ ಒಕ್ಕೂಟವು ಪ್ರತಿಭಟನೆಗೆ ಕರೆ ನೀಡಿತ್ತು. ಈ

**ಹೊನ್ನಾಳಿ ತಾಲ್ಲೂಕು ಬಂಜಾರ ಸಮಾಜದ ಮುಖಂಡ ಡಾ.ಈಶ್ವರನಾಯ್ಕ**

ಹಿನ್ನಲೆಯಲ್ಲಿ ಬಂಜಾರ, ಭೋವಿ, ಕೊರಚ, ಕೊರಮ ಸಮುದಾಯಗಳು ರಾಜ್ಯವ್ಯಾಪಿ ಪ್ರತಿಭಟಿಸಿ, ಕೇಂದ್ರಕ್ಕೆ ಶಿಫಾರಸ್ಸು ಮಾಡಿರುವ ವರದಿ ಹಿಂಪಡೆದು ಪರಿಶೀಲನೆ ನಡೆಸುವ ಒತ್ತಾಯವಾಗಿದ್ದರಿಂದ ಚುನಾವಣೆಯ ನಿರ್ಣಾಯಕದ 68 ಕ್ಷೇತ್ರಗಳಲ್ಲಿ ಪರಿಣಾಮವನ್ನು ಬಿಜೆಪಿ ಎದುರಿಸಿದೆ ಎಂದರು.

ಗೋಷ್ಠಿಯಲ್ಲಿ ರಾಜ್ಯ ಮೀಸಲಾತಿ ಸಂರಕ್ಷಣಾ ಒಕ್ಕೂಟದ ರಾಜ್ಯ ಕಾರ್ಯದರ್ಶಿ ರುದ್ರು ಪುನೀತ್, ಸಮಾಜದ ಮುಖಂಡರಾದ ತಿಮ್ಮಲಾಪುರ ಪ್ರಭುದೇವ ನಾಯ್ಕ, ಚನ್ನೇನಹಳ್ಳಿ ರಾಜಶೇಖರ್ ನಾಯ್ಕ, ನೆಲಹೊನ್ನಿಯ ಮಲ್ಲೇಶ ನಾಯ್ಕ, ಮುರುಳೀಧರ್, ಅವಿನಾಶ್, ತಿಮ್ಮೇಶ್, ಕಮ್ಮಾರಗಟ್ಟೆ ಸಚಿನ್ ಸೇರಿದಂತೆ ಇನ್ನಿತರರಿದ್ದರು.

# ‘ನಾನು ಯಾರಿಗೂ ಬುಕ್ ಆಗಿರಲಿಲ್ಲ’

## ಆಣೆ ಮಾಡಿದ ಜೆಡಿಎಸ್ ಅಭ್ಯರ್ಥಿ ಶಿವಣ್ಣ



**ರಾಣೇಬೆನ್ನೂರು**

ರಾಣೇಬೆನ್ನೂರು, ಮೇ 15- ನನ್ನ ಹೆಂಡತಿ, ಮಕ್ಕಳ ಮೇಲೆ ಆಣೆ ಮಾಡಿ ಹೇಳ್ತೇನೆ ನಾನು ಯಾರಿಗೂ ಬುಕ್ ಆಗಿರಲಿಲ್ಲ ಅಪಪ್ರಚಾರ ಮಾಡಿ ನನಗೆ ಬರುವ 30 ಸಾವಿರ ಮತಗಳನ್ನು ಬಿಜೆಪಿ ಮತ್ತು ಕಾಂಗ್ರೆಸ್‌ನವರು ಕಬಳಿಸಿದರು ಎಂದು ಮೊನ್ನಿನ ವಿಧಾನಸಭೆ ಚುನಾವಣೆಯಲ್ಲಿ ಪರಾಭವಗೊಂಡ ಜೆಡಿಎಸ್ ಅಭ್ಯರ್ಥಿ ಮಂಜುನಾಥ ಗೌಡಶಿವಣ್ಣನವರ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಇಂದು ತಮ್ಮ ಪಕ್ಷದ ಕಾರ್ಯಾಲಯದಲ್ಲಿ ಹೆಂಡತಿ ಶಶಿಕಲಾ, ನಾಲ್ವರು ಮಕ್ಕಳು, ಹಾಗೂ ಪಕ್ಷದ ಮುಖಂಡರ ಜೊತೆಗೂಡಿ ಮಾಧ್ಯಮ ಗೋಷ್ಠಿ ನಡೆಸಿದರು.

‘ಕಾಂಗ್ರೆಸ್‌ಗೆ ಬುಕ್ ಆಗಿದ್ದಾನೆ, ಬೊಮ್ಮಾಯಿ ಅವರಿಂದ ಹೇಳಿಸಿದ್ದೇವೆ ಬಿಜೆಪಿಗೆ ಮತ ನೀಡಿರಿ ಎಂದು ಬಿಜೆಪಿಯವರು, ಬಿಜೆಪಿಗೆ ಬುಕ್ ಆಗಿದ್ದೇನೆ’ ಎಂದು ಕಾಂಗ್ರೆಸ್‌ನವರು ಅಪಪ್ರಚಾರ ಮಾಡಿದರು. ನಾನು ಬುಕ್ ಆದದ್ದನ್ನು ಅವರು ಧರ್ಮಸ್ಥಳಕ್ಕೆ ಬಂದು ಮಂಜುನಾಥನ ಎದುರು ಆಣೆ ಮಾಡಲಿ. ನಾನು ನನ್ನ ಹೆಂಡತಿ, ಮಕ್ಕಳ ಜೊತೆ ಬಂದು ಆಣೆ ಮಾಡುತ್ತೇನೆ ಎಂದು ಮಂಜುನಾಥ ಸವಾಲು ಹಾಕಿದರು.

‘ತಾಂತ್ರಿಕ ದೋಷದಿಂದ ನನಗೆ ಬರಲಿದ್ದ ಪಕ್ಷದ ಫಂಡ್ ಬರಲಿಲ್ಲ. ನನ್ನ ಹಿತೈಷಿಗಳು ಕೊಟ್ಟ ಅಲ್ಪ ಪ್ರಮಾಣದ ಹಣ ವಿತರಿಸುತ್ತಿದ್ದಾಗ ನೀನು ಕೊಡುವ ಹಣ ಚಹಾ ಕುಡಿಯಲು ಆಗಲ್ಲ’ ಎನ್ನುವ ಮಾತುಗಳು ಕೇಳಿ ಬಂದವು. ಅವರು ಕೊಟ್ಟಿದ್ದಾದರೂ ನಿಮಗೆ ಎಷ್ಟು ದಿನ ಆಗುತ್ತೆ ? ಎಂದು ಪ್ರಶ್ನಿಸಿ, ನೀವು ನಿಮ್ಮದೇ ಆದ ರೀತಿಯಲ್ಲಿ ದುಡಿದೇ ಊಟ ಮಾಡಬೇಕು. ಕೇವಲ ಹಣ ನೋಡದೆ ವ್ಯಕ್ತಿಯನ್ನು ನೋಡಬೇಕು ಎಂದು ಮಂಜುನಾಥ ತಮ್ಮ ಅಳಲು ತೋಡಿಕೊಂಡರು.

ಎರಡು ಚುನಾವಣೆಗಳಲ್ಲೂ ಆಸ್ತಿ ಮಾರಿ ಚುನಾವಣೆ ಮಾಡಿದೆ, ನಾಲ್ಕು ತಿಂಗಳಿಂದ ಜನರ ಬಳಿ ಅಲೆದಾಡಿದೆ. ನನ್ನನ್ನು ನಂಬದೇ ಅಪಪ್ರಚಾರಕ್ಕೆ ಕಿವಿಗೊಟ್ಟಿದ್ದು ನೋವಾಗಿದೆ. ನನ್ನ ಆಸ್ತಿ ಹೋಯಿತು, ಮರ್ಯಾದೆ ಹೋಯಿತು, ನನ್ನ ಶ್ರಮ ಹೋಯಿತು. ನನಗೆ ಸೋಲಿನ ನೋವಿಲ್ಲ. ನಡೆದ ರಾಜಕೀಯ ಚಟುವಟಿಕೆಗಳು ಬಹಳಷ್ಟು ನೋವುಂಟು ಮಾಡಿವೆ. ಮುಂದೆ ಈ ರೀತಿ ಮಾಡ ಬೇಡಿ ಎಂದು ದುಃಖಭರಿತರಾಗಿ ಮನವಿ ಮಾಡಿದರು.

# ಹಿಂದುತ್ವ ಧರ್ಮ ಅಲ್ಲ : ದಿಗ್ವಿಜಯ್ ಸಿಂಗ್

ಜಬಲ್ಪುರ, ಮೇ 15 – ಹಿಂದುತ್ವ ಧರ್ಮ ಅಲ್ಲ. ನಾನು ಸೌಹಾರ್ದತೆ ಹಾಗೂ ಎಲ್ಲರ ಕಲ್ಯಾಣ ಬಯಸುವ ಸನಾತನ ಧರ್ಮದಲ್ಲಿ ನಂಬಿಕೆ ಇರಿಸಿದ್ದೇನೆ ಎಂದು ಕಾಂಗ್ರೆಸ್ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಹೇಳಿದ್ದಾರೆ.

ಮಧ್ಯ ಪ್ರದೇಶದ ಜಬಲ್ಪುರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುತ್ವ ಒಪ್ಪದೇ ಇರುವವರ ಮೇಲೆ ದಾಳಿ ನಡೆಸಲಾಗುತ್ತದೆ. ಹೀಗಾಗಿ ಅದು ಧರ್ಮ ಅಲ್ಲ. ಭಜರಂಗ ದಳವು ಗೂಂಡಾಗಳ ಗುಂಪಾಗಿದೆ ಎಂದು ಟೀಕಿಸಿದರು.

ನಮ್ಮದು ಸನಾತನ ಧರ್ಮ. ನಾವು ಹಿಂದುತ್ವವನ್ನು ಧರ್ಮ ಎಂದು ಪರಿಗಣಿಸುವುದಿಲ್ಲ. ನಮ್ಮದು ಸದ್ಭಾವನೆ ಹಾಗೂ ವಿಶ್ವ ಕಲ್ಯಾಣದ ಸನಾತನ ಧರ್ಮ ಎಂದರು.

ಆದರೆ, ಹಿಂದುತ್ವ ಆ ರೀತಿಯಲ್ಲ. ನಮ್ಮನ್ನು ಒಪ್ಪದವರನ್ನು ಬಡಿಗೆಯಿಂದ ಬಡಿಯಿರಿ, ಅವರ ಮನೆಗಳ ನಾಶ ಮಾಡಿ ಹಾಗೂ ಅವರ ಹಣ ಕಸಿಯಿರಿ ಎನ್ನುತ್ತದೆ ಎಂದು ಕಾಂಗ್ರೆಸ್ ನಾಯಕ ಆರೋಪಿಸಿದರು.

ಬಿಜೆಪಿ ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬಜರಂಗ ಬಲಿಯನ್ನು ಭಜರಂಗ ದಳದ ಜೊತೆ ಹೋಲಿಕೆ ಮಾಡುತ್ತಿರುವುದು ನೋವು ತಂದಿದೆ. ಭಜರಂಗ ದಳ ಇತ್ತೀಚೆಗೆ ಜಬಲ್ಪುರದಲ್ಲಿರುವ ಕಾಂಗ್ರೆಸ್ ಕಚೇರಿ ಮೇಲೆ ದಾಳಿ ನಡೆಸಿತ್ತು ಅದು ಗೂಂಡಾಗಳ ಗುಂಪು ಎಂದು ಟೀಕಿಸಿದರು.

# ಮುಂದಿನ ಚುನಾವಣೆಯಲ್ಲಿ ಪೋಸ್ಟರ್ ಅಂಟಿಸುವುದಿಲ್ಲ : ಗಡ್ಕರಿ

ಸಿಕಾರ್ (ರಾಜಸ್ಥಾನ), ಮೇ 15 – ಸೇವೆಯ ರಾಜಕೀಯದಿಂದ ಚುನಾವಣೆ ಗೆಲ್ಲಲು ಸಾಧ್ಯವೇ ಹೊರತು ಪೋಸ್ಟರ್ ಇಲ್ಲವೇ ಬ್ಯಾನರ್‌ಗಳಿಂದ ಅಲ್ಲ ಎಂದಿರುವ ಬಿಜೆಪಿ ಹಿರಿಯ ನಾಯಕ ಹಾಗೂ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ಮುಂದಿನ ಚುನಾವಣೆಯಲ್ಲಿ ಪೋಸ್ಟರ್‌ಗಳನ್ನು ಅಂಟಿಸುವುದಿಲ್ಲ ಎಂದಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಯಾವುದೇ ಪೋಸ್ಟರ್ ಅಂಟಿಸುವುದಿಲ್ಲ ಇಲ್ಲವೇ ಜನರಿಗೆ ಚಹಾ ನೀಡುವುದಿಲ್ಲ. ಮತ ನೀಡುವವರು ನೀಡಲಿ ಮತ್ತು ನೀಡದವರು ಬೇಡ ಎಂದು ಗಡ್ಕರಿ ಹೇಳಿದ್ದಾರೆ. ಮುಂದಿನ ಚುನಾವಣೆಯಲ್ಲಿ ಅತಿ ಹೆಚ್ಚಿನ ಅಂತರದಿಂದ ಗೆಲ್ಲುವ ವಿಶ್ವಾಸ ಇದೆ ಎಂದೂ ಅವರು ತಿಳಿಸಿದ್ದಾರೆ.

ಮಾಜಿ ಉಪ ರಾಷ್ಟ್ರಪತಿ ಭೈರೋನ್ ಸಿಂಗ್ ಶೆಖಾವತ್ ಅವರ ಪುಣ್ಯತಿಥಿ ಅಂಗವಾಗಿ ಸಿಕರ್ ಜಿಲ್ಲೆಯ ಖಚರಿಯಾವಸ್ ಹಳ್ಳಿಯಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನನ್ನ ಕ್ಷೇತ್ರದಲ್ಲಿ ಅತ್ಯಂತ ಕಠಿಣ ಚುನಾವಣೆ ಎದುರಿಸಿದ್ದೇನೆ. ಅಲ್ಲಿಂದ ಸ್ಪರ್ಧಿಸದಂತೆ ನನಗೆ ಜನರು ಹೇಳಿದ್ದರು. ಆದರೆ, ನಾನು ದೃಢ ನಿರ್ಧಾರದಿಂದ ಚುನಾವಣೆ ಎದುರಿಸಿದ್ದೆ. ಮುಂದಿನ ಚುನಾವಣೆಯಲ್ಲಿ ಪೋಸ್ಟರ್ ಇಲ್ಲವೇ ಬ್ಯಾನರ್ ಅಂಟಿಸುವುದಿಲ್ಲ, ಚಹಾ ಕೊಡುವುದಿಲ್ಲ ಇಲ್ಲವೇ ಬೇರೆ ಏನನ್ನೂ ಮಾಡುವುದಿಲ್ಲ. ಮತ ನೀಡುವವರು ನೀಡಲಿ, ಬೇಡದವರು ಬೇಡ ಎಂದವರು ಹೇಳಿದರು.

ಸೇವಾ ರಾಜಕೀಯ ಮಾತುಗಳಿಂದ ಇಲ್ಲವೇ ಪುಸ್ತಕಗಳ ಅಧ್ಯಯನದಿಂದ ಬರುವುದಿಲ್ಲ. ನಮ್ಮ ಕೆಲಸ ಕಾರ್ಯಗಳಿಂದ ಸೇವಾ ರಾಜಕೀಯ ಬರುತ್ತದೆ ಎಂದು ನಾಗಪುರ ಲೋಕಸಭಾ ಕ್ಷೇತ್ರ ಪ್ರತಿನಿಧಿಸುತ್ತಿರುವ ಗಡ್ಕರಿ ಹೇಳಿದ್ದಾರೆ.

ಸೇವಾ ರಾಜಕೀಯ, ಅಭಿವೃದ್ಧಿ ರಾಜಕೀಯ, ಬಡವರಿಗೆ ನೆರವಾಗುವುದು, ಬಡವರಿಗೆ ಆರೋಗ್ಯ ಸೌಲಭ್ಯ, ಯುವಕರಿಗೆ ಉದ್ಯೋಗ ಹಾಗೂ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಮತಗಳನ್ನು ಪಡೆಯಬೇಕು ಎಂದವರು ಹೇಳಿದರು.

# ಆರೆಸ್ಸೆಸ್ ನಾಯಕರ ಜೊತೆ ಬೊಮ್ಮಾಯಿ ಚರ್ಚೆ

ಬೆಂಗಳೂರು, ಮೇ 15 - ಚುನಾವಣೆ ಫಲಿತಾಂಶದ ಬಳಿಕ ಹಂಗಾಮಿ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಆರ್.ಎಸ್.ಎಸ್. ನಾಯಕ ರೊಂದಿಗೆ ಪಕ್ಷ ಸಂಘಟನೆ ಬಗ್ಗೆ ಚರ್ಚೆ ನಡೆಸಿದರು.

ಬೆಂಗಳೂರಿನ ಚಾಮರಾಜಪೇಟೆಯ ಲ್ಲಿರುವ ಕೇಶವ ಕೃಪಕ್ಕೆ ಭೇಟಿ ನೀಡುದ ನಂತರ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

ಇಂದು ಆರ್.ಎಸ್.ಎಸ್. ಮುಖಂಡ ರೊಂದಿಗೆ ಚುನಾವಣೆ ಫಲಿತಾಂಶದ ಬಗ್ಗೆ ಚರ್ಚೆ ಮಾಡಿದ್ದೇವೆ. ಬರುವಂತಹ ದಿನಗ ಳಲ್ಲಿ ಪಕ್ಷವನ್ನು ಮುಂದೆ ಹೇಗೆ ಸಂಘಟಿಸ ಬೇಕು ಎಂಬುದರ ಬಗ್ಗೆ ಚರ್ಚೆ ಆಗಿದೆ.

ರಾಜ್ಯಾಧಕ್ಷರು, ವರಿಷ್ಠರ ಜೊತೆಗೆ ಹಲವಾರು ಬಾರಿ ಚರ್ಚಿಸಿ ಭಾರತೀಯ ಜನತಾ ಪಕ್ಷವನ್ನು ಹೇಗೆ ಸಂಘಟನೆ ಮಾಡಬೇಕು ಎನ್ನುವ ತೀರ್ಮಾನ ಮಾಡುತ್ತೇವೆ ಎಂದರು. ಚುನಾವಣೆಯಲ್ಲಿ ಗೆಲುವು ಸಾಧಿಸಿದ ಶಾಸಕರ ಸಭೆಯನ್ನೂ ಕರೆದಿಲ್ಲ. ಶಾಸಕರ ಸಭೆಯನ್ನು ರಾಜ್ಯಾಧಕ್ಷರು ಕರೆಯಲಿದ್ದಾರೆ ಎಂದರು.

# ಗಗನಸಖಿಗೆ ಲೈಂಗಿಕ ಪೀಡನೆ ಪಾನಮತ್ತ ವ್ಯಕ್ತಿಯ ಬಂಧನ

ಅಮೃತ್‌ಸರ್, ಮೇ 15 - ಪಾನಮತ್ತ ಸ್ಥಿತಿಯಲ್ಲಿ ಗಗನಸಖಿಯನ್ನು ಲೈಂಗಿಕವಾಗಿ ಪೀಡಿಸಿದ ಆರೋಪದ ಮೇಲೆ ವ್ಯಕ್ತಿಯೋರ್ವನನ್ನು ಬಂಧಿಸಲಾಗಿದೆ ಎಂದು ಪಂಜಾಬ್ ಪೊಲೀಸರು ತಿಳಿಸಿದ್ದಾರೆ.

ದುಬೈನಿಂದ ಅಮೃತ್‌ಸರಕ್ಕೆ ತೆರಳುತ್ತಿದ್ದ ವಿಮಾನದಲ್ಲಿದ್ದ ಜಲಂಧರ್‌ನ ರಾಜಿಂದರ್ ಸಿಂಗ್ ಎಂಬಾತ ಗಗನಸಖಿ ಜೊತೆ ವಾಗ್ವಾದ ನಡೆಸಿ ಲೈಂಗಿಕವಾಗಿ ಪೀಡಿಸಿದ್ದಾನೆ ಎಂದು ಪೊಲೀಸರಲ್ಲಿ ದೂರು ದಾಖಲಿಸಲಾಗಿದೆ.

ಗಗನಸಖಿ ಈ ಘಟನೆಯನ್ನು ವಿಮಾನ ಸಿಬ್ಬಂದಿ ಗಮನಕ್ಕೆ ತಂದಿದ್ದಾರೆ. ಆರೋಪಿತ ಪಾನಮತ್ತ ಸ್ಥಿತಿಯಲ್ಲಿದ್ದ ಎಂದು ಪೊಲೀಸರು ಹೇಳಿದ್ದಾರೆ.

ವಿಮಾನ ಇಲ್ಲಿನ ಶ್ರೀ ಗುರು ರಾಮದಾಸ್‌ಜಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ನಂತರ ವ್ಯಕ್ತಿಯನ್ನು ಬಂಧಿಸಲಾಗಿದೆ.

# ದೇಹದ ಮೇಲೆ ಬಿಸಿಲಿನ ತಾಪದ ಪರಿಣಾಮಗಳು



ಯಾವುದೇ ವಸ್ತು ಬಿಸಿಲಿಗೆ ಇಟ್ಟಾಗ ಅದು ಬಿಸಿಯಾಗುತ್ತದೆ. ಅದೇ ತರಹ ಬಿಸಿಲಿನ ತಾಪಕ್ಕೆ ಮೈ ಒಡ್ಡಿದರೆ, ನಮ್ಮ ದೇಹದ ಉಷ್ಣಾಂಶ ಹೆಚ್ಚಾಗುತ್ತದೆ. ದೇಹ ಬೆವರಿನ ಮೂಲಕ ಈ ಉಷ್ಣವನ್ನು ಹೊರಗೆ ಹಾಕಲು ನೋಡುತ್ತದೆ (ಇದು ನಮ್ಮ ದೇಹದ ರಕ್ಷಣಾತ್ಮಕ ಕ್ರಮ). ಬೆವರಿನಲ್ಲಿ ನೀರಿನ ಅಂಶ ಮತ್ತು ಲವಣಗಳಾದ ಸೋಡಿಯಂ ಮತ್ತು ಪೊಟ್ಯಾಷಿಯಂ ಸಹ ದೇಹದಿಂದ ಹೊರಗಡೆ ಹೋಗುತ್ತವೆ. ಹೀಗಾಗಿ ಅವುಗಳ ಕೊರತೆ ಉಂಟಾಗುತ್ತದೆ. ಇದನ್ನೇ ವೈದ್ಯಕೀಯ ಭಾಷೆಯಲ್ಲಿ ನಿರ್ಜಲೀಕರಣ (dehydration) ಎನ್ನುತ್ತಾರೆ. ನಿರ್ಜಲೀಕರಣದ ಪ್ರಮಾಣಕ್ಕೆ ತಕ್ಕಂತೆ ಅದರ ಲಕ್ಷಣ ಮತ್ತು ದುಷ್ಪರಿಣಾಮಗಳು ಕಾಣಿಸಿಕೊಳ್ಳುತ್ತವೆ.

**ನಿರ್ಜಲೀಕರಣದ ಲಕ್ಷಣ ಮತ್ತು ದುಷ್ಪರಿಣಾಮಗಳು :**

ತಲೆ ಸುತ್ತು, ತಲೆನೋವು, ಸುಸ್ತಾಗುವುದು, ಬಾಯಿ ಮತ್ತು ತುಟಿಗಳು ಒಣಗುವುದು, ಕಡಿಮೆ ಮೂತ್ರ ವಿಸರ್ಜನೆ, ಹಳದಿ ಮೂತ್ರ (concentrated urine), ಸ್ನಾಯು ಸೆಳೆತ (muscles cramps), ಮಲಬದ್ಧತೆ (constipation), ಬಿ.ಪಿ. ಕಡಿಮೆಯಾಗುವುದು. ಇವು ನಿರ್ಜಲೀಕರಣದ ಲಕ್ಷಣ ಮತ್ತು ಪರಿಣಾಮಗಳು. ಇವುಗಳಿಗೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆಯದಿದ್ದರೆ ಮೂತ್ರಪಿಂಡ, ಮೆದುಳು ಮತ್ತು ಹೃದಯದ ಕಾರ್ಯಗಳಲ್ಲಿ ವ್ಯತ್ಯಾಸ ಕಾಣಿಸಿಕೊಳ್ಳುವುದು.

**ನಿರ್ಜಲೀಕರಣವನ್ನು ತಡೆಯಲು ಬೇಸಿಗೆಯಲ್ಲಿ ಅನುಸರಿಸುವ ಕ್ರಮಗಳು :**

* ಬೇಸಿಗೆ ಕಾಲದಲ್ಲಿ ಧಾರಾಳವಾಗಿ ದ್ರವ ಪದಾರ್ಥಗಳನ್ನು ಸೇವಿಸುವುದು ಮೊದಲ ಆದ್ಯತೆಯಾಗಿರುತ್ತದೆ. ಉದಾ: ನೀರು, ಮಜ್ಜಿಗೆ, ಎಳನೀರು, ತಾಜಾ ತಂಪು ಪಾನೀಯಗಳು (ಶರಬತ್ತು, ಹಣ್ಣಿನ ರಸ, ಕಬ್ಬಿನ ಹಾಲು) ಇತ್ಯಾದಿಗಳು.
* ಫ್ರಿಡ್ಜ್ ನಲ್ಲಿರುವ ತಂಪು ಪಾನೀಯಗಳು ಆರೋಗ್ಯಕ್ಕೆ ಹಿತಕರವಲ್ಲ.
* ಸಕ್ಕರೆ ಕಾಯಿಲೆ ಇರುವವರು ಹಣ್ಣಿನ ರಸವನ್ನು ಸೋಸದೆ, ಬೆಲ್ಲ ಅಥವಾ ಸಕ್ಕರೆ ಹಾಕದೆ ಸೇವಿಸಬಹುದು.
* ಹಣ್ಣು ಮತ್ತು ತರಕಾರಿಗಳಲ್ಲಿ ಲವಣಗಳಾದ ಸೋಡಿಯಂ ಮತ್ತು ಪೊಟ್ಯಾಷಿಯಂ ಹಾಗೂ ವಿಟಮಿನ್ ‘ಸಿ’ ಮತ್ತು ವಿಟಮಿನ್ ‘ಬಿ’ ಕಾಂಪ್ಲೆಕ್ಸ್ ಗಳು ಹೇರಳವಾಗಿರುತ್ತವೆ. ಅವುಗಳನ್ನು ಧಾರಾಳವಾಗಿ ಸೇವಿಸಬಹುದು.
* ಆದಷ್ಟು ಎಲ್ಲಾ ಕೆಲಸಗಳನ್ನು ಅದರಲ್ಲೂ ಅಡುಗೆ ಮನೆಯ ಕೆಲಸ ಮತ್ತು ಬಿಸಿಲಲ್ಲಿ ಮಾಡಬೇಕಾದ ಕೆಲಸಗಳನ್ನು ಬೆಳಿಗ್ಗೆ ಬಿಸಿಲು ಪ್ರಖರವಾಗುವ ಮೊದಲು ಮಾಡಿ ಮುಗಿಸಬೇಕು.
* ಆದಷ್ಟು ಸಡಿಲ ಮತ್ತು ಹತ್ತಿಯ ಉಡುಪುಗಳನ್ನು ಧರಿಸುವುದು ಕ್ಷೇಮಕರ.
* ವಯಸ್ಕರು ಬಿಸಿಲಲ್ಲಿ ಓಡಾಡುವುದನ್ನು ತಪ್ಪಿಸಬೇಕು.
* ಆಗಾಗ ಬಿ ಪಿ ಪರೀಕ್ಷೆ ಮಾಡಿಸಿಕೊಳ್ಳುತ್ತಿರಬೇಕು ಮತ್ತು ತಜ್ಞರ ಸಲಹೆ ಪಡೆಯುತ್ತಿರಬೇಕು.

- ಡಾ.ಬಿ.ಎಂ.ವಿಶ್ವನಾಥ್, ದಾವಣಗೆರೆ.

# ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ ವಿದ್ಯುತ್ ಬಿಲ್ ಪಾವತಿಸಲ್ಲ

ಚಿತ್ರದುರ್ಗ, ಮೇ 15 - ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ. ನಾವು ವಿದ್ಯುತ್ ಬಿಲ್ ಪಾವತಿಸುವುದಿಲ್ಲ ಎಂದು ತಾಲ್ಲೂಕಿನ ಗ್ರಾಮಸ್ಥರು ಹೇಳಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ತಾಲ್ಲೂಕಿನ ಜಾಲಿಕಟ್ಟೆ ಗ್ರಾಮದ ವಿದ್ಯುತ್ ಪ್ರತಿನಿಧಿ ಗೋಪಿ ಅವರು ಏಪ್ರಿಲ್ ತಿಂಗಳ ವಿದ್ಯುತ್ ಬಿಲ್ ವಸೂಲಿಗೆ ಸೋಮವಾರ ತೆರಳಿದ್ದರು.

**ಗ್ರಾಮಸ್ಥರ ಹೇಳಿಕೆಯ ವಿಡಿಯೋ ವೈರಲ್**

ಆದರೆ, ಉಚಿತ ವಿದ್ಯುತ್ ಗ್ಯಾರಂಟಿ ನೀಡಿರುವ ಕಾಂಗ್ರೆಸ್ ಅಧಿಕಾರಕ್ಕೆ ಬಂದಿರುವ ಕಾರಣ, ನಾವು ಹಣ ಪಾವತಿಸುವುದಿಲ್ಲ ಎಂದು ಗ್ರಾಮಸ್ಥರು ಹೇಳಿದ್ದಾರೆ. ಆದೇಶ ಬರುವವರೆಗೂ ಹಣ ಪಾವತಿಸಲೇಬೇಕು ಎಂದು ಗ್ರಾಮ ವಿದ್ಯುತ್ ಪ್ರತಿನಿಧಿ ಹೇಳಿದ್ದಾರೆ. ಇದಕ್ಕೆ ಒಪ್ಪದ ಗ್ರಾಮಸ್ಥರು, ಆದೇಶದ ಬಗ್ಗೆ ಕಾಂಗ್ರೆಸ್‌ನವರಿಗೇ ಕೇಳಿ. ಗ್ರಾಮದಲ್ಲಿ ಯಾರೂ ಈ ತಿಂಗಳಿನಿಂದ ಹಣ ಪಾವತಿಸುವುದಿಲ್ಲ ಎಂದಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ವಿದ್ಯುತ್ ಪ್ರಸರಣ ಅಧಿಕಾರಿಗಳು, ಸರ್ಕಾರದ ಆದೇಶ ಬರುವ ತನಕ ವಿದ್ಯುತ್ ಹಣ ಪಾವತಿಸಬೇಕು ಎಂದು ಸ್ಪಷ್ಟಪಡಿಸಿದ್ದಾರೆ.

# ಗುಡ್ಡದ ರಂಗವ್ವನಹಳ್ಳಿ ಸರ್ಕಾರಿ ಶಾಲೆಗೆ ನಾಲ್ಕನೇ ಬಾರಿ ಶೇ. 100 ಫಲಿತಾಂಶ

ಚಿತ್ರದುರ್ಗ, ಮೇ 15- ತಾಲ್ಲೂಕಿನ ಗುಡ್ಡದ ರಂಗವ್ವನಹಳ್ಳಿ ಸರ್ಕಾರಿ ಪ್ರೌಢಶಾಲೆಗೆ ಸತತವಾಗಿ ನಾಲ್ಕನೇ ವರ್ಷ ಶೇ. 100 ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾದ 36 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು 6 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 27 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಹಾಗೂ 3 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ (ಆಡಳಿತ) ಕೆ. ರವಿಶಂಕರ್ ರೆಡ್ಡಿಯವರು ಶಾಲೆಯ ಮುಖ್ಯ ಶಿಕ್ಷಕರಾದ ಫೈರೋಜ ಬೇಗಮ್ ಅಭಿನಂದಿಸಿದ್ದಾರೆ.

**ಸೈಟುಗಳು ಮಾರಾಟಕ್ಕಿವೆ**
ಶಿವಗಂಗಾ ಚೌಟ್ರಿ ಹಿಂಭಾಗ ಬಂಗ್ಲೆ ಸೈಟು 40 ಅಡಿ ರಸ್ತೆಗೆ 60x83 ದಕ್ಷಿಣ, KHB ಕಾಲೋನಿಯಲ್ಲಿ 40x60 ಪಶ್ಚಿಮ, ಅಮರನಾಥ ಲೇಔಟ್‌ನಲ್ಲಿ 30x35.5 ಪೂರ್ವಕ್ಕೆ, ಗ್ಲಾಸ್ ಹೌಸ್ ಪಕ್ಕದಲ್ಲಿ 30x50 ಉತ್ತರ.
ಬಸವರಾಜ N
98440 84229

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**FOR RENT**
Office space for rent first floor 11x20 (242 sqft) Vidyanagar main road, 1st bus stop, next to Cafe coffeday.
99725 77991, 94480 60579

**ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ**
ವರ್ಕ್ ಫ್ರಮ್ ಹೋಮ್ (ಟೆಲಿಕಾಲಿಂಗ್) (ಪಾರ್ಟ್ ಟೈಂ) (ಫುಲ್ ಟೈಂ) ಆಫೀಸ್ ವರ್ಕ್ (ಟೆಲಿಕಾಲಿಂಗ್) (ಪಾರ್ಟ್ ಟೈಂ) (ಫುಲ್ ಟೈಂ) ಯಾವುದೇ ಶುಲ್ಕ ಇರುವುದಿಲ್ಲ. ಸಂಬಳ : 18000, 32000.
ವಿದ್ಯಾರ್ಹತೆ : 10ನೇ ತರಗತಿಯಿಂದ ಪಿಯುಸಿ & ಡಿಗ್ರಿಯವರೆಗೆ.
93805 86274

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಸಂಪರ್ಕಿಸಿ.
ಎಸ್.ಪಿ. ಸೋಮಶೇಖರ್
98803 37686

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಪಾರ್ಸಲ್ ಕಟ್ಟಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ. ಗರಿಷ್ಠ ವೇತನ ನೀಡಲಾಗುವುದು. ಸಂಪರ್ಕಿಸಿ :
63666 35593

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ತಕ್ಷಣ ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್, ಅಕೌಂಟೆಂಟ್ಸ್, ಕಂಪ್ಯೂಟರ್ ಆಪರೇಟರ್ಸ್, ಟೆಲಿಕಾಲರ್ಸ್, ಹೆಲ್ಪರ್ಸ್, ಟೆಕ್ನೀಷಿಯನ್ಸ್, ಆಫೀಸ್‌ಗಳಿಗೆ, ಕಂಪನಿಗಳಿಗೆ 7th, SSLC, PUC, Degree, ITI, Diploma ಆದವರು ನೇರ ನೇಮಕಾತಿ. ಸಂಬಳ : 16000 ರೂ , 56,000 ರೂ.
97316 70789

**ಸೈಟ್ ಮಾರಾಟಕ್ಕಿದೆ**
ಶಾಮನೂರಿನ ಪೋದಾರ್ ಸ್ಕೂಲ್ ಹತ್ತಿರ 40x30 ಸೈಟ್ ಮಾರಾಟಕ್ಕಿದೆ.
95918 29780
80731 78139

**JUICE MASTER ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಜ್ಯೂಸ್ ಮೇಕರ್, ಕ್ಲೀನರ್ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ.
88924 51765, 80936 82725

**ಸೈಟುಗಳು ಮಾರಾಟಕ್ಕಿವೆ**
ಬಸವೇಶ್ವರ ಲೇಔಟ್ 40x60 (ಪಶ್ಚಿಮ)
ಆಂಜನೇಯ ಬಡಾವಣೆ 50x60 (ಕಾರ್ನರ್)
ವಿವೇಕಾನಂದ ಬಡಾವಣೆ 30x50 (ಉತ್ತರ)
ಶಿವಕುಮಾರ ಬಡಾವಣೆ 30x42 ಪೂರ್ವ
ಬನಶಂಕರಿ ಬಡಾವಣೆ 40x40 (ಪೂರ್ವ)
ಸಂಪರ್ಕಿಸಿ :
95385 65909

**EC / ಇಸಿ, E-swathu, Khatha Change Building Licence & Other Property Documents**
96118-66449

**GRS ಹೋಂ ಪ್ರಾಡಕ್ಟ್ ಫೀಲ್ಡ್ ವರ್ಕ್**
ಫೀಲ್ಡ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ
ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಹಾವೇರಿ ಎಸ್.ಎಸ್.ಎಲ್.ಸಿ., ಪಿಯುಸಿ,ಐಟಿಐ (M/F) ಸಂಬಳ : 10,000 ರಿಂದ 50,000 ಪೆಟ್ರೋಲ್ + ಇನ್‌ಸೆಂಟಿವ್ ಸೌಲಭ್ಯವಿದೆ.
ಜಗದೀಶ್ ಎಸ್. 70194 65768

**WANTED**
Required Male Office Assistant
ANDANUR CHITS (R)
Ram & Co. Circle, Davanagere.

**ವಾಹನಗಳು ಬಾಡಿಗೆಗೆ ಬೇಕಾಗಿವೆ**
ಸನ್ನಿಧಿ ಟ್ರೇಡಿಂಗ್ ಕೋ ದಾವಣಗೆರೆ ವಿಭಾಗಕ್ಕೆ ಕಮರ್ಷಿಯಲ್ ವಾಹನಗಳನ್ನು ಅಟ್ಯಾಚ್ ಮಾಡಿಕೊಳ್ಳುತ್ತಿದ್ದೇವೆ. ಬಜಾಜ್ ಮ್ಯಾಕ್ಸಿಮ x ವೈಡ್ ಮಹೀಂದ್ರ ಆಲ್ಫ, ಮಹೀಂದ್ರ ತೆರೊ ವಿಯಗೋ ಏಪ್
89045 80039/30/37
73493 91292

**ಮನೆ ಬಾಡಿಗೆಗೆ ಇದೆ**
ಜಯನಗರ ಬಿ ಬ್ಲಾಕ್, ಸನ್ ರೈಸ್ ಅಪಾರ್ಟ್‌ಮೆಂಟ್ ಪಕ್ಕ, ಬಸ್ ಸ್ಟಾಪ್ ಹತ್ತಿರ, 2 ಬೆಡ್ ರೂಂ ವಿಶಾಲವಾದ ಕೋಣೆಗಳ (40x60) ಸುಸಜ್ಜಿತ, ಉತ್ತರ ರಸ್ತೆ, ಪೂರ್ವ ಬಾಗಿಲಿನ, 1ನೇ ಮಹಡಿ ಮನೆ ಬಾಡಿಗೆಗೆ ಇದೆ. ಬೋರ್ ವೆಲ್ & ಕಾರ್ಪೊರೇಷನ್ ನೀರಿನ ಸೌಲಭ್ಯವಿರುತ್ತದೆ.
ಸಂಪರ್ಕಿಸಿ :
81055 58389

**HOUSE FOR LEASE**
Independent house, 3 BHK 5th main, 5th cross, St. Pauls Convent Road, PJ extension, Davangere.
88616 89590

**ಸೈಟುಗಳು ದೊರೆಯುತ್ತವೆ**
ಡಾಲರ್ಸ್‌ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಜಯನಗರ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು, ಜಮೀನುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**WANTED**
Banking Sector Tele Caller (Female Only)
Qualification : Any Degree
90715 55081
Interview time : 11AM

**HOUSE TO LET**
2 BHK well furnished house for rent (vegetarian)
Karnataka bank building BT layout Davangere 577001.
98445 33131, 70192 37177

**House For Rent**
3 BHK, First floor east face 30x40 size Shivakumarswamy layout, 2nd stage, Hadadi Road, Davangere-5.
93532 60156

**ಮನೆ ಲೀಸ್‌ಗೆ ಇದೆ**
1 BHK ವಿತ್ ಅಟ್ಯಾಚ್ ಇರುವ ಮನೆಗಳು ಲೀಸ್‌ಗೆ ಇವೆ. #389 /G-54, ಶ್ರೀ ಸಾಯಿ ಬಾಬಾ ದೇವಸ್ಥಾನ ಹಿಂಭಾಗ, ಜಯನಗರ, ದಾವಣಗೆರೆ.
ಸಂಪರ್ಕಿಸಿ :
9844710844, 8884362134

**WANTED FOR RECEPTIONIST**
Age 21 - 27
HAIRPOINT UNISEX SALON
2nd Floor, No 2988-2A,2B. 7th Main, 3rd Cross Rd, MCC 'B' Block, Davanagere-4. Karnataka
97386 64400, 91483 19342

**ಮನೆ ಮಾರಾಟಕ್ಕೆ**
ಕೆ.ಬಿ ಬಡಾವಣೆ ಕೆನರಾ ಬ್ಯಾಂಕ್ ರೋಡ್, 15x45 ಅಳತೆಯ ದಕ್ಷಿಣ ಮುಖವಿರುವ ಗ್ರೌಂಡ್ ಹಾಗೂ ಮೊದಲನೇ ಮಹಡಿ.
ಆಸಕ್ತರು ಸಂಪರ್ಕಿಸಿ.
98440 25005

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 35x60 ಉತ್ತರ-ಪೂರ್ವ ಕಾರ್ನರ್, ಹೀರೊ ಸ್ಕೂಲ್ ಹತ್ತಿರ 30x46 ಪೂರ್ವ, ಡಾಲರ್ಸ್‌ಕಾಲೋನಿ ಸುತ್ತ-ಮುತ್ತ ಬಡಾವಣೆಯಲ್ಲಿ 30x50 ಪೂರ್ವ, 30x50 ಉತ್ತರ. ಸ್ವಾಮಿ ಏಜೆಂಟ್, ವಿದ್ಯಾನಗರ.
97421 44715

**ಮನೆಗಳು ಬಾಡಿಗೆಗೆ / ಲೀಸ್‌ಗೆ ಇವೆ**
ಸಿಂಗಲ್ ಬೆಡ್‌ರೂಂ, ಡಬಲ್ ಬೆಡ್ ರೂಂ, ಮೂರು ಬೆಡ್ ರೂಂ, ವಿದ್ಯಾನಗರ, ತರಳಬಾಳು ಬಡಾವಣೆ , ಆಂಜನೇಯ ಬಡಾವಣೆ, ಶಿವಕುಮಾರ ಸ್ವಾಮಿ ಬಡಾವಣೆ. ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಹೋಟೆಲ್ ಉದ್ಯಮಕ್ಕೆ ಕೆಲಸಗಾರರು ಬೇಕಾಗಿದ್ದಾರೆ.
ಸಂಪರ್ಕಿಸಿ :
70190 51306

**ಸೈಟುಗಳು ಮಾರಾಟಕ್ಕಿವೆ**
ದೇವರಾಜ್ ಅರಸ್ ಬಡಾವಣೆ ಪಶ್ಚಿಮ 40x60 (ಪ್ರಿಯಾ ದರ್ಶಿನಿ ಕಾನ್ವೆಂಟ್ ಹತ್ತಿರ) ಸ್ವಾಮಿ ವಿವೇಕಾನಂದ ಬಡಾವಣೆ ದಕ್ಷಿಣ 15x45, ಗ್ಲಾಸ್ ಹೌಸ್ ಹಿಂಭಾಗ ಉತ್ತರ 30x40 (ಅಕ್ಕ-ಪಕ್ಕ) ಶಿವ-ಪಾರ್ವತಿ ಬಡಾವಣೆ ಪೂರ್ವ 30x35, 40x60 (ಕಮರ್ಷಿಯಲ್)
ಐಗೂರು ವಿಜಯಕುಮಾರ
99457 02495

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**CHANGE OF NAME**
I, Thippeswamy Resident at 2nd main, 5th cross, Benki Nagar Harihar, Davanagere District has changed my name as **THIPPESHI ANGADI** in front of Harihar Notary on 15.05.2023. In future all my transactions and documents will be in new Name as under signed.
THIPPESHI ANGADI

**ಬೇಕಾಗಿದ್ದಾರೆ**
ಸನ್ನಿಧಿ ಟ್ರೇಡಿಂಗ್ ಕೋ ದಾವಣಗೆರೆ ವಿಭಾಗಕ್ಕೆ ಬೇಕಾಗಿದ್ದಾರೆ. ನುರಿತ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್ ಮಾಸಿಕ ವೇತನ : 10,000 -25,000 ರೂ.
89045 80039/30/37
08192 464315, 73493 91292

**ರೂಮ್ ಹಾಗೂ ಮಳಿಗೆಗಳು ಬಾಡಿಗೆಗೆ**
ಶಕ್ತಿ ನಗರದಲ್ಲಿ ರೂಮ್ ಹಾಗೂ ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ.
ಸಂಪರ್ಕಿಸಿ:
94484 39639

**ಬೇಕಾಗಿದ್ದಾರೆ**
ಪಾರ್ಟ್ ಟೈಮ್/ಫುಲ್ ಟೈಮ್ ಜಾಬ್ SSLC/PUC/ITI/DIPLOMA ಪಾಸ್/ಫೇಲ್ ಆದ ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ:
ಜ್ಯೋತಿ ಮೆಟಲ್ಸ್, ಹಳೇ ಬಸ್ಟ್ಯಾಂಡ್. ಗಣಪತಿ ಗುಡಿ ಪಕ್ಕ, ದಾವಣಗೆರೆ.
98800 34643

**ಮನೆ ಮಾರಾಟಕ್ಕಿದೆ**
30x50 ಉತ್ತರ ಸೈಟ್ ಪೂರ್ವ ಬಾಗಿಲಿನ ಬೋರ್ ವೆಲ್ & ಮುನ್ಸಿಪಲ್ ನೀರಿನ ಸೌಕರ್ಯ ವಿರುವ ಗ್ರೌಂಡ್ ಫ್ಲೋರ್ ಒಂದು ಮನೆ, ಮೊದಲನೆ ಮಹಡಿ 2 ಮನೆ ಇರುವ ಮನೆ ರಂಗನಾಥ ಬಡಾವಣೆ (ತರಳಬಾಳು ಬಡಾವಣೆ) ಯಲ್ಲಿ ಮಾರಾಟಕ್ಕಿದೆ. ಮತ್ತು ಬಾಡಿಗೆ/ಲೀಸ್‌ಗೆ ಕುವೆಂಪುನಗರ, 6ನೇ ಕ್ರಾಸ್‌ನಲ್ಲಿ, 2ನೇ ಮಹಡಿಯ 2BHK ಮನೆ ಬಾಡಿಗೆಗೆ / ಲೀಸ್‌ಗೆ ಇದೆ.
99642 22777

**Tuition for Supplementary exam SSLC & PUC**
100% ಫಲಿತಾಂಶ
ಸಿಂಚನ ಕೋಚಿಂಗ್ ಸೆಂಟರ್, ದಾವಣಗೆರೆ
8861445913 8553278258

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ವಿದ್ಯಾರ್ಥಿಗಳಿಗೆ ಉಚಿತ ಯೂನಿಫಾರ್ಮ್ ನೀಡಲಾಗುವುದು
ಶ್ರೀ ಗಂಗೋತ್ರಿ ಕಮ್ಯೂನಿಟಿ ಕಾಲೇಜ್ ಲಾಯರ್ ರೋಡ್, ದಾವಣಗೆರೆ.
86602 35013

**ಬೇಕಾಗಿದ್ದಾರೆ**
ಸನ್ನಿಧಿ ಟ್ರೇಡಿಂಗ್ ಕೋ ದಾವಣಗೆರೆ ವಿಭಾಗಕ್ಕೆ ಬೇಕಾಗಿದ್ದಾರೆ. ಡೆಲಿವರಿ ಬಾಯ್ಸ್, ಅಕೌಂಟ್ ಎಕ್ಸಿಕ್ಯೂಟಿವ್
89045 80039/30/37
08192 464315, 73493 91292

**ಕೆಲಸಕ್ಕೆ ಬೇಕಾಗಿದ್ದಾರೆ**
ಡೆಂಟಲ್ ಆರ್ಟ್ ಲ್ಯಾಬ್
ಇಂಡಸ್ಟ್ರೀಯಲ್ ಏರಿಯಾ, ಲೋಕಿಕೆರೆ ರೋಡ್, ದಾವಣಗೆರೆ-5.
ವಿದ್ಯಾರ್ಹತೆ : ದ್ವಿತೀಯ ಪಿಯುಸಿ ಅಥವಾ ಯಾವುದೇ ಡಿಗ್ರಿ
99000 05433

**ತಕ್ಷಣ ಬೇಕಾಗಿದ್ದಾರೆ**
5th, 7th, 10th, PUC, Degree ITI, Diploma ಯುವಕ-ಯುವತಿಯರು MNC ಕಂಪನಿಗಳಿಗೆ, ಆಫೀಸ್‌ಗಳಿಗೆ, ಶೋ ರೂಂಗಳಿಗೆ ಬಿಗ್ ಬಜಾರ್ಸ್‌ಗಳಿಗೆ ನೇರ ನೇಮಕಾತಿ. ಸಂಬಳ 17,100/-ರೂ, 56,000/- ವಸತಿ, ಊಟವಿದೆ.
96862 20858

**ಮನೆ ಮಾರಾಟಕ್ಕಿದೆ**
ದಾವಣಗೆರೆ ಎಸ್.ಪಿ.ಎಸ್. ನಗರದ ‘ಎ’ ಬ್ಲಾಕ್‌ನಲ್ಲಿ ಸೂಕ್ತ ದಾಖಲೆಗಳಿರುವ 20x30 ಮನೆ ಮಾರಾಟಕ್ಕಿದೆ, ಹಾಲಿ ಖಾಲಿ ಇದೆ (13.77 ಲಕ್ಷ) ಸಂಪರ್ಕಿಸಿ :
94806 36501

**HOUSE FOR RENT**
# 916, Nijalingappa Badavane, 1st main, 4th Cross, Davangere. near Amrutha Vidyalaya, School Nijalingappa Badavane, DVG.,
9380040368, 8296469527

**ಬೇಕಾಗಿದ್ದಾರೆ**
ನಗರದ ಕೆ. ಜಿ. ಪಿ. ಬಂಗಾರದ ಅಂಗಡಿಯಲ್ಲಿ ಸೇಲ್ಸ್ ಬಾಯ್ಸ್, ಸೇಲ್ಸ್ ಗರ್ಲ್ಸ್, ಆಫೀಸ್ ಸ್ಟಾಫ್ ಬೇಕಾಗಿದ್ದಾರೆ. ಆಕರ್ಷಕ ವೇತನ ಕೊಡಲಾಗುವುದು. ಸಂಪರ್ಕಿಸಿ.
87921 46470

# ದೆಹಲಿ ತಲುಪಿದ ಸಿದ್ದರಾಮಯ್ಯ, ರಾಜ್ಯದಲ್ಲೇ ಉಳಿದ ಡಿಕೆಶಿ

ನವದೆಹಲಿ, ಮೇ 15 – ಕರ್ನಾಟಕದ ಮುಂದಿನ ಮುಖ್ಯಮಂತ್ರಿ ಯಾರು ಎಂಬ ರಹಸ್ಯ ಮುಂದುವರೆದಿದ್ದು, ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರು ಹೈಕಮಾಂಡ್ ಕರೆಯ ಮೇರೆಗೆ ದೆಹಲಿಗೆ ತೆರಳಿದ್ದಾರೆ. ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ನಾಳೆ ದೆಹಲಿಗೆ ತಲುಪಲಿದ್ದಾರೆ.

ಶಾಸಕರ ಜೊತೆ ಚರ್ಚೆ ನಡೆಸಿ, ಅವರ ಅಭಿಪ್ರಾಯ ಸಂಗ್ರಹಿಸಿರುವ ಹೈಕಮಾಂಡ್‌ನ ಮೂವರು ವೀಕ್ಷಕರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ವಿವರ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಚರ್ಚೆಗಾಗಿ ದೆಹಲಿಗೆ ಬರಬೇಕು ಎಂದು ಹೈಕಮಾಂಡ್ ತಿಳಿಸಿತ್ತು. ಸಿದ್ದರಾಮಯ್ಯ ಮಧ್ಯಾಹ್ನ ರಾಜಧಾನಿ ತಲುಪಿದರು. ಆದರೆ, ಶಿವಕುಮಾರ್ ಅವರು ಅಸ್ವಸ್ಥತೆಯ ಕಾರಣ ತಿಳಿಸಿ ದೆಹಲಿಗೆ ತೆರಳಲಿಲ್ಲ. ನಾಳೆ ದೆಹಲಿಗೆ ಹೋಗುವುದಾಗಿ ಅವರು ಹೇಳಿದ್ದಾರೆ.

ಯಾರಿಗೆ ಎಷ್ಟು ಶಾಸಕರ ಬೆಂಬಲ ಇದೆ ಎಂಬ ಚರ್ಚೆಗಳು ನಡೆಯುತ್ತಿರುವ ಮಧ್ಯೆ ಹೇಳಿಕೆ ನೀಡಿರುವ ಶಿವಕುಮಾರ್, ತಮ್ಮ ಬಲ 135. ನನ್ನ ಅಧ್ಯಕ್ಷತೆಯಲ್ಲಿ ಪಕ್ಷ ಈ ಸ್ಥಾನಗಳನ್ನು ಗೆದ್ದಿದೆ ಎಂದಿದ್ದಾರೆ.



ವೀಕ್ಷಕರಾದ ಸುಶೀಲ್ ಕುಮಾರ್ ಶಿಂಧೆ, ಜಿತೇಂದ್ರ ಸಿಂಗ್ ಹಾಗೂ ದೀಪಕ್ ಬಾಬರಿಯ ಅವರು ಸೋಮವಾರ ಸಂಜೆ ದೆಹಲಿಗೆ ಮರಳಿದ್ದಾರೆ.

ವೀಕ್ಷಕರು ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಖರ್ಗೆ ಭೇಟಿ ಮಾಡಿ ಶಾಸಕರ ಅಭಿಪ್ರಾಯಗಳ ಕುರಿತು ಚರ್ಚಿಸಿದ್ದಾರೆ.

ಇದಕ್ಕೂ ಮುಂಚೆ ಬೆಂಗಳೂರಿನಲ್ಲಿ ವೀಕ್ಷಕರು ಶಾಸಕರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಚರ್ಚಿಸಿದ್ದರು. ಶಾಸಕರ ಅಭಿಪ್ರಾಯ ತಿಳಿಯುವ ಸಲುವಾಗಿ ಗುಪ್ತ ಮತದಾನ ಸಹ ಮಾಡಲಾಗಿತ್ತು.

ಇದಕ್ಕೂ ಮುಂಚೆ ಮಾತನಾಡಿದ್ದ ಶಿವಕುಮಾರ್, ಇಂದು ನನ್ನ ಜನ್ಮ ದಿನ. ಸಾಕಷ್ಟು ಜನರು ನನಗೆ ಅಭಿನಂದಿಸಿದ್ದಾರೆ. ನನ್ನ ಕುಟುಂಬದ ಜೊತೆ ದೇವರ ದರ್ಶನಕ್ಕೆ ತೆರಳಬೇಕಿದೆ. ಆನಂತರವೇ ದೆಹಲಿಗೆ ಹೋಗಬೇಕಿದೆ. ಯಾವ ಸಮಯಕ್ಕೆ ಹೋಗುತ್ತೇನೋ ಗೊತ್ತಿಲ್ಲ ಎಂದಿದ್ದರು.

ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಖರ್ಗೆ ಶೀಘ್ರದಲ್ಲೇ ನಿರ್ಧರಿಸುವ ನಿರೀಕ್ಷೆ ಇದೆ. ಅವರು ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಜೊತೆ ಚರ್ಚೆ ನಡೆಸಿದ ನಂತರವೇ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದ್ದಾರೆ.

ಈ ನಡುವೆ, ಮುಖ್ಯಮಂತ್ರಿ ಪ್ರಮಾಣ ವಚನ ಸಮಾರಂಭಕ್ಕೆ ಪಕ್ಷ ದೊಡ್ಡ ಮಟ್ಟದ ಸಿದ್ಧತೆ ಆರಂಭಿಸಿದೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪ್ರತಿಪಕ್ಷಗಳ ಹಲವಾರು ನಾಯಕರನ್ನು ಆಹ್ವಾನಿಸಲಾಗುವುದು.

## ಡಾ. ಅತ್ತಿಗುಟ್ಟೆ ರಾಮಶೆಟ್ಟಿ ಪ್ರಭಾಕರ್ ಅವರಿಗೆ ವಿದೇಶದ ಅತ್ಯುನ್ನತ ಗೌರವ



ದಾವಣಗೆರೆ, ಮೇ 15- ನಗರದ ಬಾಪೂಜಿ ದಂತ ವೈದ್ಯಕೀಯ ಮತ್ತು ಆಸ್ಪತ್ರೆಯ ನಿವೃತ್ತ ಪ್ರಾಂಶುಪಾಲರೂ, ಪ್ರಾಧ್ಯಾಪಕರೂ, ಮಕ್ಕಳ ದಂತ ವೈದ್ಯಕೀಯ ವಿಭಾಗದ ಮುಖ್ಯಸ್ಥರೂ ಆದ ಡಾ. ಅತ್ತಿಗುಪ್ಪೆ ರಾಮಶೆಟ್ಟಿ ಪ್ರಭಾಕರ್ ಅವರು ಯು.ಕೆ.ಯ ಸ್ಕಾಟ್ಲೆಂಡ್‌ನ ಎಡ್ವಿನ್‌ಬರ್ಗ್ ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ದಂತ ವೈದ್ಯಕೀಯ ವಿಭಾಗದ ಡೀನ್ ಡಾ. ಪಿಲಿಪ್ ಟೇಲರ್ ಅವರಿಂದ ತಮ್ಮ ಎಫ್‌ಡಿಎಸ್‌ಆರ್‌ಸಿಎಸ್ ಫೆಲೋಶಿಪ್ ಮಾನ್ಯತೆಯನ್ನು ಸ್ವೀಕರಿಸಿದರು. ಪ್ರಭಾಕರ್ ಅವರು 2021 ರಲ್ಲಿ ಅವರು ಸ್ಕಾಟ್ಲೆಂಡ್ ಗ್ಲಾಸ್ಗೋದ ರಾಯಲ್ ಕಾಲೇಜ್ ಆಫ್ ಫಿಸಿಷಿಯನ್ಸ್ ಅಂಡ್ ಸರ್ಜನ್‌ನಿಂದ ಫೆಲೋಶಿಪ್ ಪಡೆದಿದ್ದರು.

## ಎಸ್ಸೆಸ್ಸೆಂ ರಾಜ್ಯದ ಮುಖ್ಯಮಂತ್ರಿಯಾಗಲಿ ಅಕ್ಕಿ ವ್ಯಾಪಾರಿಗಳ ಆಶಯ

ದಾವಣಗೆರೆ, ಮೇ 15- ಉತ್ತರ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರನ್ನು ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ನಗರದ ಅಕ್ಕಿ ವರ್ತಕ ಎಸ್. ಜಿ.ಉಳುವಯ್ಯ ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದ್ದಾರೆ.

ಎಸ್ಸೆಸ್ಸೆಂ ಶ್ರಮಪಟ್ಟು ಕೆಲಸ ಮಾಡುವ ಉತ್ಸಾಹಿ ಯುವಕ, ವೈಯಕ್ತಿಕ ನೆಲೆಯಲ್ಲಿ ಯಶಸ್ವೀ ಪುರುಷ ಎಂದಿರುವ ಅವರು, ಕೈಗಾರಿಕೆಗಳನ್ನು ಸ್ಥಾಪಿಸಿ ಸಾಕಷ್ಟು ಜನರಿಗೆ ಉದ್ಯೋಗ ನೀಡಿದ್ದಾರೆ.

ಇಡೀ ದೇಶ ಕೊರೊನಾ ಭಯದಿಂದ ತತ್ತರಿಸಿದಾಗ ಎಸ್ಸೆಸ್ಸೆಂ ಸ್ವಂತ ಹಣ ಖರ್ಚು ಮಾಡಿ ಜನತೆಗೆ ಉಚಿತ ಲಸಿಕೆ ಕೊಟ್ಟರು. ಒಬ್ಬ ಯೋಗ್ಯರಿಗೆ ಅಧಿಕಾರ ಸಿಕ್ಕರೆ ಏನಾಗಬಹುದು ಎಂಬುದಕ್ಕೆ ಕೆಲ ನಿದರ್ಶನಗಳು ಎಂದು ಹೇಳಿದ್ದಾರೆ.

15000 ಆಶ್ರಯ ಮನೆಗಳ ನಿರ್ಮಾಣ, ಏಷ್ಯಾದಲ್ಲೇ 2ನೇ ದೊಡ್ಡ ಗಾಜಿನ ಮನೆ ನಿರ್ಮಾಣ. ವಿವಿಧೆಡೆ ಪಾರ್ಕುಗಳ ಅಭಿವೃದ್ಧಿ, ಸಿಸಿ ರಸ್ತೆಗಳ ನಿರ್ಮಾಣ, ಕುಂದುವಾಡ ಕೆರೆಯ ಅಭಿವೃದ್ಧಿ ಜೊತೆಗೆ ರಾಂಪುರ, ಮಾಳಗೊಂಡನಹಳ್ಳಿ, ಬೇತೂರು, ಟಿವಿ ಸ್ಟೇಷನ್ ಕೆರೆಗಳ ಅಭಿವೃದ್ಧಿ ಹೀಗೆ ಹತ್ತು ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ.

ಇಂತಹ ಸಮರ್ಪಕರ ಕೈಯಲ್ಲಿ ಮುಖ್ಯಮಂತ್ರಿ ಹುದ್ದೆ ಬಂದರೆ ಅಭಿವೃದ್ಧಿ ಪರ್ವಕ್ಕೆ ನಾಂದಿ ಹಾಡಿದಂತಾಗುತ್ತದೆ ಎಂದು ಉಳುವಯ್ಯ ತಿಳಿಸಿದ್ದಾರೆ.

## ಎಸ್ಸೆಸ್‌ಗೆ ಸ್ಥಾನ ಕೊಟ್ಟು ಲಿಂಗಾಯತ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಲಿ

ದಾವಣಗೆರೆ, ಮೇ 15- ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ದೊರೆತಿದ್ದು, ಮಧ್ಯ ಕರ್ನಾಟಕ ದಾವಣಗೆರೆ ಜಿಲ್ಲೆಯಲ್ಲಿ ಏಳು ವಿಧಾನಸಭಾ ಕ್ಷೇತ್ರಗಳ ಪೈಕಿ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಭರ್ಜರಿ ಜಯ ಗಳಿಸಿದ್ದು, ಪಕ್ಷದ ಹೈಕಮಾಂಡ್ ಇದನ್ನು ಪರಿಗಣಿಸಿ ಆರು ಬಾರಿ ಶಾಸಕರಾಗಿರುವ ಶಾಮನೂರು ಶಿವಶಂಕರಪ್ಪನವರನ್ನು ಅಥವಾ ನಾಲ್ಕು ಬಾರಿ ಶಾಸಕರಾಗಿರುವ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್‌ರವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವ ಮೂಲಕ ಲಿಂಗಾಯತ ಸಮುದಾಯಕ್ಕೆ ಹಾಗೂ ಮಧ್ಯ ಕರ್ನಾಟಕ ಭಾಗಕ್ಕೆ ಪ್ರಾತಿನಿಧ್ಯ ನೀಡಬೇಕೆಂದು ಪಕ್ಷದ ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ಕೆ.ಎಲ್.ಹರೀಶ್ ಬಸಾಪುರ ವಿನಂತಿಸಿದ್ದಾರೆ.

ಕಾಂಗ್ರೆಸ್ ಪಕ್ಷದ 135 ಶಾಸಕರ ಪೈಕಿ ಲಿಂಗಾಯತ ಸಮುದಾಯದ 39 ಶಾಸಕರು ಆಯ್ಕೆಯಾಗಿದ್ದು, ದಾವಣಗೆರೆ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳ ಪೈಕಿ ಆರರಲ್ಲಿ, ಚಿತ್ರದುರ್ಗ ಹಾಗೂ ಹಾವೇರಿ ಎರಡು ಜಿಲ್ಲೆಗಳ ತಲಾ ಆರು ವಿಧಾನಸಭಾ ಕ್ಷೇತ್ರಗಳ ಪೈಕಿ ಐದರಲ್ಲಿ ಪಕ್ಷ ಭರ್ಜರಿ ಜಯ ಗಳಿಸಿದ್ದು, ಶಾಮನೂರು ಶಿವಶಂಕರಪ್ಪ ಅವರನ್ನು ಅಥವಾ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವುದರಿಂದ ಮಧ್ಯ ಕರ್ನಾಟಕಕ್ಕೆ, ಲಿಂಗಾಯತ ಸಮುದಾಯಕ್ಕೆ ಹಾಗೂ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಪಕ್ಷ ಬೆಂಬಲಿಸಿದ ಈ ಜಿಲ್ಲೆಯ ಮತದಾರರಿಗೆ ಗೌರವ ತೋರಿಸಿದಂತಾಗುತ್ತದೆ ಎಂದು ಪಕ್ಷದ ವರಿಷ್ಠರ ಗಮನ ಸೆಳೆದಿದ್ದಾರೆ.

## ಸತೀಶ್ ಜಾರಕಿಹೊಳಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಲು ಒತ್ತಾಯ

ದಾವಣಗೆರೆ, ಮೇ 15- ಕಾಂಗ್ರೆಸ್ ಗೆಲುವಿಗೆ ಶ್ರಮಿಸಿದ ಸತೀಶ್ ಜಾರಕಿಹೊಳಿ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಪ್ರೊ.ಎ.ಬಿ. ರಾಮಚಂದ್ರಪ್ಪ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಕರ್ನಾಟಕದಲ್ಲಿ ರಾಜಕೀಯ ಅಧಿಕಾರ ಸಂವಿಧಾನ ಪರವಾದ ಕಾಂಗ್ರೆಸ್‌ಗೆ ದೊರಕಿರುವುದನ್ನು ಮಾನವ ಬಂಧುತ್ವ ವೇದಿಕೆ ಸ್ವಾಗತಿಸಿದೆ ಎಂದ ಅವರು, ಈ ಬಾರಿ ಎಲ್ಲಾ ಸಮುದಾಯಗಳು ಬಹುತೇಕ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿವೆ. ಮುಖ್ಯವಾಗಿ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳು ಈ ಬಾರಿ ಕಾಂಗ್ರೆಸ್‌ಗೆ ಶಕ್ತಿ ನೀಡಿವೆ. ಮೀಸಲು ಕ್ಷೇತ್ರಗಳಲ್ಲಿ ಬಹುತೇಕ ಕಾಂಗ್ರೆಸ್ ಅಭ್ಯರ್ಥಿಗಳೇ ಆಯ್ಕೆಯಾಗಿದ್ದಾರೆ ಎಂದರು.

ಎಸ್.ಟಿ. ಮೀಸಲು ಕ್ಷೇತ್ರದಿಂದ 15 ಹಾಗೂ ಎಸ್ಸಿ ಮೀಸಲು ಕ್ಷೇತ್ರದಿಂದ 22 ಜನರು ಆಯ್ಕೆಯಾಗಿದ್ದಾರೆ. ಎಸ್.ಟಿ. ಸಮುದಾಯದಲ್ಲಿ ಪ್ರಶ್ನಾತೀತ ಪ್ರಭಾವಿ ರಾಜ್ಯ ನಾಯಕರಾದ ಸತೀಶ್ ಜಾರಕಿಹೊಳಿ ಅವರಿಗೆ ಸಂಪುಟದಲ್ಲಿ ಉಪ ಮುಖ್ಯಮಂತ್ರಿ ಸ್ಥಾನ ಹಾಗೂ ಪ್ರಮುಖ ಖಾತೆಯನ್ನು ನೀಡುವಂತೆ ಆಗ್ರಹಿಸಿದರು. ಎಸ್ಸಿ, ಎಸ್ಟಿ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯದ ಮಹಿಳಾ ಶಾಸಕರಿಗೂ ಸಂಪುಟ ದರ್ಜೆ ಸಚಿವ ಸ್ಥಾನ ನೀಡಬೇಕೆಂದು ಮನವಿ ಮಾಡಿದ ಅವರು, ಶೋಷಿತ ಸಮುದಾಯಗಳಿಗೆ ಹೆಚ್ಚಿನ ರಾಜಕೀಯ ಅಧಿಕಾರ ನೀಡಿದರೆ ಸಮಾಜದ ಅಭಿವೃದ್ಧಿ ಸಾಧ್ಯ ಎಂಬುದು ಸಂವಿಧಾನ ಆಶಯ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಮಾನವ ಬಂಧುತ್ವ ವೇದಿಕೆ ಹಾಗೂ ಸತೀಶ್ ಜಾರಕಿಹೊಳಿ ಅಭಿಮಾನಿಗಳ ಬಳಗದ ರಘು ದೊಡ್ಡಮನಿ, ಐ.ಬಿ. ಅಂಜುಕುಮಾರ್, ಕರಿಯಪ್ಪ ಮಾಲಿಗೇರ್ ಉಪಸ್ಥಿತರಿದ್ದರು.

## ಲಿಂ|| ಓಂಕಾರಪ್ಪ ದಂಪತಿ ಸ್ಮರಣಾರ್ಥ ಅನ್ನ ಸಂತರ್ಪಣೆ, ಸೇವಾ ಕಾರ್ಯ

ದಾವಣಗೆರೆ, ಮೇ 15- ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ನಿವೃತ್ತ ಮ್ಯಾನೇಜರ್ ಲಿಂ.ಮಾಗಾನಹಳ್ಳಿ ಓಂಕಾರಪ್ಪ ಮತ್ತು ನಿವೃತ್ತ ಡಯಟ್ ಉಪನ್ಯಾಸಕಿ ಲಿಂ. ಎಂ.ಜಿ. ನೀಲಮ್ಮ ಇವರ ದ್ವಿತಿಯ ವರ್ಷದ ಪುಣ್ಯ ಸ್ಮರಣೆ ಅಂಗವಾಗಿ ಬಾಡಾ ಕ್ರಾಸ್‌ನಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ವಚನ ಗಾಯನ, ಸಂಗೀತ ಗೋಷ್ಠಿ ಮತ್ತು ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಪುಣ್ಯಸ್ಮರಣೆ ಮತ್ತು ಪ್ರಸಾದ ಸೇವೆ ಮಾಡಲಾಯಿತು.

ಅಲ್ಲದೇ ಎಸ್ಪಿ ಆಫೀಸ್ ಬಳಿಯ ರಿಂಗ್ ರಸ್ತೆಯಲ್ಲಿರುವ ನವಜ್ಯೋತಿ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ, ಸಂಕಷ್ಟದಲ್ಲಿರುವ ಹೆಣ್ಣು ಮಕ್ಕಳ ಹಾಗು ಮಹಿಳೆಯರ ಪುನರ್ವಸತಿ ಕೇಂದ್ರದಲ್ಲಿ ಶಾಲಾ ಸಾಮಗ್ರಿ ಮತ್ತು ನಿತ್ಯೋಪಯೋಗಿ ವಸ್ತುಗಳನ್ನು ವಿತರಿಸಲಾಯಿತು.

ಓಂಕಾರಪ್ಪನವರ ಪುತ್ರ ಇಂಜಿನಿಯರ್ ಎಂ.ಓ.ನಿರಂಜನ್ ಈ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು.

## ಪಶುಸಂಗೋಪನಾ ತರಬೇತಿ ಇಂದು

ದಾವಣಗೆರೆ ಪಶು ಆಸ್ಪತ್ರೆ ಆವರಣ ದಲ್ಲಿರುವ ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇಂದಿನಿಂದ ಮೂರು ದಿನ ಕುರಿ ಮತ್ತು ಮೇಕೆ ಸಾಗಾಣಿಕೆ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

## ಶಾಸಕಿ ಎಂ.ಪಿ.ಲತಾ ರವರಿಗೆ ಅದ್ದೂರಿ ಸ್ವಾಗತ

ಹರಪನಹಳ್ಳಿ, ಮೇ 15- ಚುನಾವಣೆಯಲ್ಲಿ ಜಯ ಗಳಿಸಿ ಹೊಸಪೇಟೆಯಿಂದ ಹರಪನಹಳ್ಳಿಗೆ ಶನಿವಾರ ರಾತ್ರಿ ಆಗಮಿಸಿದ ನೂತನ ಪಕ್ಷೇತರ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಅವರಿಗೆ ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಅಭಿಮಾನಿಗಳು, ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು.



ಹೊಸಪೇಟೆಯಿಂದ ಹೂವಿನಹಡಗಲಿಗೆ ತೆರಳಿ ದಿ. ಎಂ.ಪಿ.ಪ್ರಕಾಶ್, ಎಂ.ಪಿ. ರವೀಂದ್ರರವರ ಸಮಾಧಿಗೆ ಪೂಜೆ ಸಲ್ಲಿಸಿ, ಪಟ್ಟಣಕ್ಕೆ ಆಗಮಿಸಿದ ಅವರು, ಕೋಟೆ ಆಂಜನೇಯ ದೇವಸ್ಥಾನಕ್ಕೆ ತೆರಳಿ, ಸ್ವಾಮಿಯ ದರ್ಶನ ಪಡೆದು ಕೊಟ್ಟೂರು ರಸ್ತೆಯ ತಮ್ಮ ನಿವಾಸಕ್ಕೆ ತೆರಳಿ, ಬಳಿಕ ಪ್ರವಾಸಿ ಮಂದಿರ ವೃತ್ತಕ್ಕೆ ಆಗಮಿಸಿದರು.

ಐ.ಬಿ.ವೃತ್ತದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಜಮಾಯಿಸಿದ್ದ ಅಭಿಮಾನಿಗಳು, ಕಾರ್ಯಕರ್ತರು ಪಟಾಕಿ ಸಿಡಿಸಿ, ಹೂವಿನ ಮಳೆ ಸುರಿಸಿ, ಜಯಘೋಷ ಹಾಕಿ ಅದ್ದೂರಿಯಾಗಿ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ಇಲ್ಲಿಯವರೆಗೂ ಶಾಸಕರು ಇದ್ದರು. ಇದೇ ಪ್ರಥಮ ಬಾರಿಗೆ ಮಹಿಳಾ ಶಾಸಕಿಯಾಗಿ ಬಂದಿದ್ದೇನೆ. ಎಲ್ಲಾ ನಿಮ್ಮಿಂದಾಗಿರುವುದು. ಈ ಪ್ರೀತಿ ಕೊನೆಯವರೆಗೂ ಇರಲಿ ಎಂದರು. ನೀವೆಲ್ಲರೂ ಶಾಸಕರು ಇದ್ದ ಹಾಗೆ ಎಂದ ಅವರು, ಒಟ್ಟಾಗಿ ಕೆಲಸ ಮಾಡಿ ಹರಪನಹಳ್ಳಿಯನ್ನು ಅಭಿವೃದ್ಧಿಗೊಳಿಸೋಣ ಎಂದು ನುಡಿದರು.

ಇದಕ್ಕೂ ಪೂರ್ವದಲ್ಲಿ ಹರಪನಹಳ್ಳಿ ಗಡಿಭಾಗ ಕಾನಹಳ್ಳಿ ಗ್ರಾಮದಲ್ಲಿ ಮಹಿಳೆಯರು ಆರತಿ ಬೆಳಗಿ, ಹೂವಿನ ಹಾರ ಹಾಕಿ ಸ್ವಾಗತಿಸಿದರು. ದಾರಿಯುದ್ದಕ್ಕೂ ಅವರನ್ನು ಅದ್ದೂರಿಯಾಗಿ ಬರಮಾಡಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಮುಖಂಡರಾದ ಎಚ್. ಎಂ.ಮಲ್ಲಿಕಾರ್ಜುನ, ಗೌತಮ ಪ್ರಭು, ಎಂ.ವಿ. ಅಂಜಿನಪ್ಪ, ಬಿ.ಕೆ.ಪ್ರಕಾಶ್, ಬಿ.ಬಿ. ಹೊಸೂರಪ್ಪ, ಅಬ್ದುಲ್ ರೆಹಮಾನ್, ಕಣಿವಿಹಳ್ಳಿ ಮಂಜುನಾಥ್, ಪಿ. ಮಹಾಬಲೇಶ್ವರಗೌಡ, ಎಂ.ಪಿ.ನಾಯ್ಕ, ನಿಟ್ಟೂರು ಸಣ್ಣಹಾಲಪ್ಪ, ವಕೀಲ ವೆಂಕಟೇಶ್, ವಸಂತಪ್ಪ, ಕೆ.ಎಂ.ಬಸವರಾಜಯ್ಯ, ಲಾಠಿ ದಾದಾಪೀರ್, ಗೊಂಗಡಿ ನಾಗರಾಜ್, ಉದ್ದಾರ ಗಣೇಶ, ವೈ.ಕೆ.ಬಿ.ದುರುಗಪ್ಪ, ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಕಾಂಗ್ರೆಸ್ ಬಹುಮತದ ನಂತರ 'ಹಿಂಸಾ ಗ್ಯಾರಂಟಿ': ಕಟೀಲ್



ಬೆಂಗಳೂರು, ಮೇ 15 - ಕಾಂಗ್ರೆಸ್ ಪಕ್ಷವು ಬಹುಮತ ಗಳಿಸಿದ ತಕ್ಷಣ ರಾಜ್ಯದ ವಿವಿಧ ಕಡೆಗಳಲ್ಲಿ 'ಹಿಂಸಾ ಗ್ಯಾರಂಟಿ ಸ್ಕೀಮ್' ಜಾರಿಗೆ ತರಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಸಂಸದ ನಳಿನ್ ಕುಮಾರ್ ಕಟೀಲ್ ಅವರು ತೀವ್ರವಾಗಿ ಖಂಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಹೊಸಕೋಟೆ ಸೇರಿದಂತೆ ರಾಜ್ಯದ ವಿವಿಧೆಡೆಗಳಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ಹಲ್ಲೆ ಮಾಡುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಹೊಸಕೋಟೆಯಲ್ಲಿ ಒಬ್ಬ ಕಾರ್ಯಕರ್ತರನ್ನು ಹತ್ಯೆ ಮಾಡಿದ್ದು, ಇತರೆ ಇಬ್ಬರ ಮೇಲೆ ತೀವ್ರವಾಗಿ ಹಲ್ಲೆ ಮಾಡಲಾಗಿದೆ. ಇದು ಅತ್ಯಂತ ಖಂಡನೀಯ ಎಂದು ಅವರು ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕರು ಇಂತಹ ಹಿಂಸಾಚಾರದ ಪ್ರವೃತ್ತಿಗೆ ಆಸ್ಪದ ಕೊಡಬಾರದು ಎಂದವರು ಎಚ್ಚರಿಸಿದ್ದಾರೆ. ರಾಜ್ಯದ ವಿವಿಧ ಕಡೆಗಳಲ್ಲಿ ದೇಶದ್ರೋಹಿ ಚಟುವಟಿಕೆಗಳು ಹೆಚ್ಚಾಗಿವೆ, ಇದನ್ನು ತಡೆಯಬೇಕು. ಪಾಕಿಸ್ತಾನದ ಧ್ವಜ ಹಾರಿಸುವುದು ದೇಶದ್ರೋಹದ ಚಟುವಟಿಕೆಯಾಗಿದ್ದು, ಇದನ್ನು ನಿಯಂತ್ರಿಸಬೇಕು. ಯಾವುದೇ ಕಾರಣಕ್ಕೂ ಇಂತಹ ಹಿಂಸಾಚಾರದ ದೇಶದ್ರೋಹಿ ಚಟುವಟಿಕೆಗಳನ್ನು ಸಹಿಸಲು ಸಾಧ್ಯವಿಲ್ಲ ಎಂದವರು ತಿಳಿಸಿದ್ದಾರೆ.

ಕಾಂಗ್ರೆಸ್ ಮುಖಂಡರು ತಮ್ಮೊಳಗಿನ ಭಿನ್ನಮತವನ್ನು ಬದಿಗಿಟ್ಟು ತಾವು ಈಗಾಗಲೇ ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಗಳನ್ನು ಈಡೇರಿಸಲು ಮುಂದಾಗಬೇಕು. ಹಿಂಸೆಯನ್ನು ಪ್ರಚೋದಿಸುವವರು ಮತ್ತು ದೇಶದ್ರೋಹಿ ಚಟುವಟಿಕೆಗಳಿಗೆ ಬೆಂಬಲ ನೀಡುವವರನ್ನು ಬಂಧಿಸುವಂತೆ ಪೊಲೀಸ್ ಇಲಾಖೆಗೆ ಸೂಚಿಸಬೇಕೆಂದು ಅವರು ಆಗ್ರಹಿಸಿದ್ದಾರೆ.

## ಎಸ್ಸೆಸ್‌ಗೆ ಮುಖ್ಯಮಂತ್ರಿ ಸ್ಥಾನ ನೀಡಲು ಒತ್ತಾಯ

ದಾವಣಗೆರೆ, ಮೇ 15- ದಾವಣಗೆರೆ ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿ ಅಥವಾ ಉಪಮುಖ್ಯಮಂತ್ರಿ ಸ್ಥಾನವನ್ನು ನೀಡುವಂತೆ ಶಾಮನೂರು ಶಿವಶಂಕರಪ್ಪ ಹಾಗೂ ಎಸ್. ಎಸ್. ಮಲ್ಲಿಕಾರ್ಜುನ್ ಅಭಿಮಾನಿಗಳ ಬಳಗ ಒತ್ತಾಯಿಸಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಳಗದ ಮುಖ್ಯಸ್ಥ ಎಲ್.ಕೆ. ಕರೇಗೌಡಪ್ಪ ಅವರು, ಶಾಮನೂರು ಶಿವಶಂಕರಪ್ಪ ಅವರು ಕಳೆದ 67 ವರ್ಷಗಳಿಂದ ಕೆಪಿಸಿಸಿ ಖಾಯಂ ಖಜಾಂಚಿಯಾಗಿ, ಶಾಸಕರಾಗಿ, ಸಚಿವರಾಗಿ ದಾವಣಗೆರೆ ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಅವರಿಗೆ ಮುಖ್ಯಮಂತ್ರಿ ಅಥವಾ ಉಪ ಮುಖ್ಯಮಂತ್ರಿ ಸ್ಥಾನ ನೀಡಿ ಗೌರವಿಸಬೇಕೆಂದು ಮನವಿ ಮಾಡಿದರು.

ಹಿಂದೂ, ಮುಸ್ಲಿಂ, ಕ್ರೈಸ್ತ ಸೇರಿದಂತೆ ಸರ್ವ ಜನರ ಆಶೋತ್ತರಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಾ ಬಂದಿದ್ದಾರೆ. ರಾಜಕೀಯದ ಅನುಭವದ ಆಧಾರದ ಮೇಲೆ ಅವರಿಗೆ ಸೂಕ್ತ ಸ್ಥಾನಮಾನ ನೀಡಬೇಕೆಂದರು.

ರಾಜ್ಯದಲ್ಲಿ ವೀರಶೈವ ಸಮಾಜ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ, ಅಧಿಕ ಸ್ಥಾನಗಳನ್ನು ಗೆಲ್ಲಿಸಿಕೊಡುವ ಮೂಲಕ ಸರ್ಕಾರ ರಚನೆಗೆ ಅವಕಾಶ ನೀಡಿದೆ. ಎಸ್.ಎಸ್. ಮಲ್ಲಿಕಾರ್ಜುನ್ ಸಹ ಯುವ ಮುಖಂಡರಿದ್ದು, ಎರಡು ಬಾರಿ ಕ್ಯಾಬಿನೆಟ್ ದರ್ಜೆ ಸಚಿವರಾಗಿ ಕೆಲಸ ಮಾಡಿದ್ದು, ಜಿಲ್ಲೆಯಲ್ಲಿ ಅನೇಕ ಅಭಿವೃದ್ಧಿ ಮಾಡಿರುವ ಇವರಿಗೆ ಸಂಪುಟ ದರ್ಜೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬಳಗದ ಸಿ. ಮಂಜಪ್ಪ, ಕೆ.ಎಸ್. ರೇವಣ್ಣ, ಜಿ.ಎಸ್.ಪರಮೇಶ್, ಒ. ಎನ್. ಬಸವರಾಜಪ್ಪ, ಈಶ್ವರ್, ಚಂದ್ರಶೇಖರಪ್ಪ, ಎಸ್. ಅಣ್ಣೇಶ್, ಮರುಳಸಿದ್ದಪ್ಪ ಮತ್ತಿತರರಿದ್ದರು.

## ಎಸ್ಸೆಸ್‌ಗೆ ಸಿಎಂ, ಎಂ.ಬಿ. ಪಾಟೀಲ್‌ಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಲು ವೀರಶೈವ ಮಹಾಸಭಾ ಆಗ್ರಹ

ದಾವಣಗೆರೆ, ಮೇ 15- ಹಿರಿಯ ರಾಜಕೀಯ ಮುತ್ಸದ್ಧಿ, ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರಿಗೆ ಮುಖ್ಯ ಮಂತ್ರಿ ಅಥವಾ ಎಂ.ಬಿ. ಪಾಟೀಲ್‌ಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಮಹಾಸಭಾ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ 39 ಮಂದಿ ಶಾಸಕರು ವೀರಶೈವ ಲಿಂಗಾಯತ ಸಮಾಜದಿದಂದ ಚುನಾಯಿತರಾಗಿದ್ದಾರೆ. ಭಾರತದಲ್ಲಿ ನಾಲ್ಕು ಕೋಟಿ, ರಾಜ್ಯದಲ್ಲಿ ಎರಡು ಕೋಟಿ ಜನಸಂಖ್ಯೆ ಹೊಂದಿರುವ ವೀರಶೈವ ಲಿಂಗಾಯತ ಸಮಾಜದ ಹಿರಿಯ ಮುಖಂಡರಾದ ಶಿವಶಂಕರಪ್ಪ ಅವರಿಗೆ ಮುಖ್ಯಮಂತ್ರಿ ಸ್ಥಾನವನ್ನು, ಎಂ.ಬಿ. ಪಾಟೀಲ್, ಈಶ್ವರ ಖಂಡ್ರೆ, ಎಸ್. ಎಸ್. ಮಲ್ಲಿಕಾರ್ಜುನ್ ಈ ಮೂವರಲ್ಲಿ ಒಬ್ಬರಿಗೆ ಉಪ ಮುಖ್ಯಮಂತ್ರಿ ಸ್ಥಾನವನ್ನು ನೀಡುವಂತೆ ಒತ್ತಾಯಿಸಿದರು.

ಸಂಪುಟದಲ್ಲಿ 8 ರಿಂದ 9 ಲಿಂಗಾಯತ ಶಾಸಕರಿಗೆ ಸಚಿವ ಸ್ಥಾನ ನೀಡುತ್ತಾರೆಂಬ ವಿಶ್ವಾಸ ಕೂಡ ತಮ್ಮದಾಗಿದ್ದು, ಹೆಚ್ಚಿನ ಆದ್ಯತೆ ನೀಡುವಂತೆ ಪಕ್ಷಾತೀತವಾಗಿ ವೀರಶೈವ ಸಮುದಾಯದಿಂದ ಮನವಿ ಮಾಡುತ್ತಿದ್ದೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಹಾಸಭಾ ಮುಖಂಡರಾದ ಬಿ.ಜೆ. ರಮೇಶ್, ಕರೇಶಿವಪ್ಪ ಸಿದ್ದೇಶ್, ಐಗೂರು ಚಂದ್ರಶೇಖರ್, ಬುಳ್ಳಾಪುರದ ವಿಶ್ವನಾಥ್, ಕೊರಟಿಕೆರೆ ಶಿವಕುಮಾರ್, ನಿರ್ಮಲ ಸುಭಾಷ್ ಉಪಸ್ಥಿತರಿದ್ದರು.

## ಬಿ.ದೇವೇಂದ್ರಪ್ಪ ಗೆಲುವಿಗೆ ಕಾರ್ಯಕರ್ತರ ಸಂಭ್ರಮ

ಹರಪನಹಳ್ಳಿ, ಮೇ 15- ಜಗಳೂರು ಕ್ಷೇತ್ರದ ನೂತನ ಶಾಸಕರಾಗಿ ಕಾಂಗ್ರೆಸ್ ಅಭ್ಯರ್ಥಿ ಬಿ.ದೇವೇಂದ್ರಪ್ಪ ಜಯ ಗಳಿಸಿದ ಹಿನ್ನೆಲೆಯಲ್ಲಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.



ನೂತನ ಶಾಸಕ ಉಚ್ಚಂಗಿದುರ್ಗಕ್ಕೆ ಆಗಮಿಸುತ್ತಾರೆ ಎನ್ನುವ ಮಾಹಿತಿ ತಿಳಿಯುತ್ತಿದ್ದಂತೆ, ಪಾದಗಟ್ಟೆ ಬಳಿ ನೂರಾರು ಮಂದಿ ಬೆಂಬಲಿಗರು ಸೇರಿದ್ದರು. ಉತ್ಸವಾಂಬ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ಕೆಲ ಸಮಯದ ಬಳಿಕ ಗ್ರಾಮಕ್ಕೆ ಬರಲಾಗುವುದಿಲ್ಲ ಎನ್ನುವ ಮಾಹಿತಿ ತಿಳಿದ ಕಾರ್ಯಕರ್ತರು, ಅಣಜಿ ಕ್ರಾಸ್ ಬಳಿ ಜಮಾಯಿಸಿದ್ದರು. ಸುಮಾರು ಎರಡು ಗಂಟೆಗಳ ಕಾಲ ಕಾದ ಬಳಿಕ ಆಗಮಿಸಿದ ಬಿ.ದೇವೇಂದ್ರಪ್ಪ ಕಂಡ ಕಾರ್ಯಕರ್ತರಲ್ಲಿ ಹರ್ಷೋದ್ಗಾರ ಮೊಳಗಿತು. ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಕಾರ್ಯಕರ್ತರು ಹೂವಿನ ಹಾರ ಹಾಕಿ ಅಭಿನಂದಿಸಿದರು.

ಹರಪನಹಳ್ಳಿ

ಈ ಸಂದರ್ಭದಲ್ಲಿ ಕ್ಷೇತ್ರದ ಮತದಾರರ ಗೆಲುವಾಗಿದೆ. ಎಲ್ಲಾ ಹಿರಿಯರ ಮತ್ತು ಕಿರಿಯರ ಮಾರ್ಗದರ್ಶನ ಪಡೆದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಅರಸೀಕೆರೆ ಬ್ಲಾಕ್ ವ್ಯಾಪ್ತಿಯಲ್ಲಿ ಕಚೇರಿ ತೆರೆದು ಅಲ್ಲಿನ ಸಾರ್ವಜನಿಕರ ಕುಂದು-ಕೊರತೆಗಳನ್ನು ಆಲಿಸಿ ಪರಿಹಾರ ಒದಗಿಸುವ ಪ್ರಯತ್ನ ಮಾಡುವುದಾಗಿ ನೂತನ ಶಾಸಕ ಬಿ. ದೇವೇಂದ್ರಪ್ಪ ಹೇಳಿದರು.

ಕ್ಷೇತ್ರದ ಮತದಾರರ ಗೆಲುವಾಗಿದೆ. ಎಲ್ಲಾ ಹಿರಿಯರ ಮತ್ತು ಕಿರಿಯರ ಮಾರ್ಗದರ್ಶನ ಪಡೆದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆ'. ಅರಸೀಕೆರೆ ಬ್ಲಾಕ್ ವ್ಯಾಪ್ತಿಯಲ್ಲಿ ಕಚೇರಿ ತೆರೆದು ಅಲ್ಲಿನ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಪರಿಹಾರ ಒದಗಿಸುವ ಪ್ರಯತ್ನ ಮಾಡುವುದಾಗಿ ನೂತನ ಶಾಸಕ ಬಿ.ದೇವೇಂದ್ರಪ್ಪ ಹೇಳಿದರು.

ಈ ಸಂದರ್ಭದಲ್ಲಿ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ, ಯರಬಳ್ಳಿ ಉಮಾಪತಿ, ಶೆಟ್ಟಿನಾಯ್ಕ, ಪೂಜಾರ್ ಮರಿಯಪ್ಪ, ಸಿದ್ದೇಶ್, ಕೆಂಚಪ್ಪ, ಮಂಜುನಾಥ್, ತುಂಬಿಗೆರೆ ಶಿವಣ್ಣ, ಅಲ್ಲಾಭಕ್ಷಿ, ಅಂಜಿನಪ್ಪ ಉಪಸ್ಥಿತರಿದ್ದರು.

## ಡಾ. ಜಿ. ಪರಮೇಶ್ವರ್‌ಗೆ ಸಿಎಂ ಸ್ಥಾನ ನೀಡಲು ಛಲವಾದಿ ಸಭಾ ಒತ್ತಾಯ

ದಾವಣಗೆರೆ, ಮೇ 16- ಕಳೆದ 40 ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಸೇವೆ ಸಲ್ಲಿಸಿರುವ ಅನುಭವಿ ರಾಜಕಾರಣಿ, ಛಲವಾದಿ ಸಮಾಜದ ಡಾ. ಜಿ. ಪರಮೇಶ್ವರ್ ಅವರಿಗೆ ನೂತನ ಮಂತ್ರಿಮಂಡಲದಲ್ಲಿ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಜಿಲ್ಲಾ ಛಲವಾದಿ ಮಹಾಸಭಾ ಆಗ್ರಹಿಸಿದೆ.

ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾ ಜಿಲ್ಲಾಧ್ಯಕ್ಷ ಎನ್. ರುದ್ರಮುನಿ ಅವರು, ರಾಜ್ಯದಲ್ಲಿ 33 ಲಕ್ಷ ಜನಸಂಖ್ಯೆ ಇರುವ ಛಲವಾದಿ ಸಮಾಜದಿಂದ 14 ಜನ ಶಾಸಕರು ವಿವಿಧ ಪಕ್ಷಗಳಿಂದ ಚುನಾಯಿತರಾಗಿದ್ದಾರೆ. ಎಲ್ಲಾ ಶಾಸಕರನ್ನು ಮಹಾಸಭಾ ಅಭಿನಂದಿಸುತ್ತದೆ ಎಂದರು.

ಕೊರಟಿಕೆರೆ ಕ್ಷೇತ್ರದಿಂದ ಡಾ. ಜಿ. ಪರಮೇಶ್ವರ್, ಟಿ. ನರಸೀಪುರ ಹೆಚ್. ಸಿ.ಮಹದೇವಪ್ಪ, ಹುಬ್ಬಳ್ಳಿ-ಧಾರವಾಡ ಪೂರ್ವ ಪ್ರಸಾದ್ ಅಬ್ಬಾಯಿ, ಮಳವಳ್ಳಿ ನರೇಂದ್ರಸ್ವಾಮಿ, ಚಿತ್ತಾಪುರ ಪ್ರಿಯಾಂಕ ಖರ್ಗೆ, ಬಂಗಾರಪೇಟೆ ಎಸ್.ಎನ್. ನಾರಾಯಣಸ್ವಾಮಿ, ಆನೇಕಲ್ ಬಿ. ಶಿವಣ್ಣ, ಕೊಳ್ಳೆಗಾಲ ಎ.ಆರ್. ಕೃಷ್ಣಮೂರ್ತಿ, ಮುಳಬಾಗಿಲು ಸಮೃದ್ಧಿ ಮಂಜುನಾಥ್, ಸಕಲೇಶಪುರ ಸಿಮೆಂಟ್ ಮಂಜು, ಕುಡುಚಿ ಮಹೇಂದ್ರ ತಮ್ಮಣ್ಣನವರ್, ನಂಜನಗೂಡು ದರ್ಶನ್ ಧ್ರುವನಾರಾಯಣ್, ಮೂಡಿಗೆರೆ ನಯನ ಮೋಟಮ್ಮ ಇವರು ಆಯ್ಕೆಯಾಗಿರುವ ಬಗ್ಗೆ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಛಲವಾದಿ ಮಹಾಸಭಾದ ಮುಖಂಡರಾದ ಎಸ್. ಶೇಖರಪ್ಪ, ನಾಗಭೂಷಣ್, ಕೊಟ್ರಬಸಪ್ಪ, ರೇವಣಸಿದ್ಧಪ್ಪ, ಚನ್ನಪ್ಪ, ಐಗೂರು ಹನುಮಂತಪ್ಪ, ಹೆಚ್. ಜಯಪ್ಪ, ಫಕ್ಕೀರಪ್ಪ ಮತ್ತಿತರರಿದ್ದರು.

## ನದಿಗಳ ಶುದ್ಧೀಕರಣ ಅರ್ಜಿ ತಳ್ಳಿ ಹಾಕಿದ ಸುಪ್ರೀಂ ಕೋರ್ಟ್

ನವದೆಹಲಿ, ಮೇ 15 - ಗಂಗೆ ಹಾಗೂ ಯಮುನಾ ನದಿಗಳನ್ನು ಶುದ್ಧೀಕರಿಸುವ ನಿರ್ದೇಶನ ನೀಡಬೇಕು ಎಂಬ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ನದಿಗಳ ಶುದ್ಧೀಕರಣಕ್ಕೆ ನಿರ್ದೇಶನ ನೀಡಬೇಕು ಹಾಗೂ ನದಿಗಳ ಪುನಶ್ಚೇತನದ ಕ್ರಿಯಾ ಯೋಜನೆಯ ನಿಗಾ ವಹಿಸಬೇಕು ಎಂದು ಮನವಿ ದಾಖಲಿಸಲಾಗಿತ್ತು.

ಆದರೆ, ಅರ್ಜಿಯನ್ನು ತಳ್ಳಿ ಹಾಕಿರುವ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ. ಪರ್ಡಿವಾಲ ಅವರನ್ನು ಒಳಗೊಂಡ ಪೀಠ, ಈ ಬಗ್ಗೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದಲ್ಲಿ ಅರ್ಜಿ ದಾಖಲಿಸುವಂತೆ ತಿಳಿಸಿದೆ.

## ಹರಿಹರದಲ್ಲಿಂದು ಕಾಂಗ್ರೆಸ್ ಸಭೆ

ಕಾಂಗ್ರೆಸ್ ಆತ್ಮಾವಲೋಕನ ಸಭೆ ಹೆಚ್.ಕೆ. ವೀರಪ್ಪ ಕಲ್ಯಾಣ ಮಂಟಪದಲ್ಲಿ ಇಂದು ಮಧ್ಯಾಹ್ನ 3 ಘಂಟೆಗೆ ಹರಿಹರ ವಿಧಾನಸಭಾ ಕ್ಷೇತ್ರದ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರ ಹಾಗೂ ಮುಖಂಡರ ಆತ್ಮಾವಲೋಕನ ಸಭೆಯನ್ನು ಹರಿಹರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ನಂದಿಗಾವಿ ಶ್ರೀನಿವಾಸ್ ಅವರ ನೇತೃತ್ವದಲ್ಲಿ ಕರೆಯಲಾಗಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ. ಬಿ. ಅಬೀದ್ ಅಲಿ, ಎಲ್. ಬಿ. ಹನುಮಂತಪ್ಪ ತಿಳಿಸಿದ್ದಾರೆ.

### ಅಮ್ಮ

ಓ ನನ್ನ ಅಮ್ಮನೇ, ಬದುಕಿನ
ಭರವಸೆಯ ತುಂಬಿದ
ದೇವಿಯೇ, ನೀ ಕಲಿಸಿದ
ಶಿಸ್ತುಜೀವನ ಕ್ರಮ ಬದ್ದತೆ,
ಸಮಾಜ ಮುಖಿಯಾಗೆಂದಿತ್ತು
ಕಷ್ಟ-ಸುಖ-ದುಃಖಗಳ ಪರಿ
ಬಾಳಿನ ಪಥಕ್ಕೆ ಜೋತಿಯಾಗಿ
ಜೀವನಕ್ಕೆ ಪಾಠವನ್ನೇ ಕಲಿಸಿತು
ನನ್ನಯ ವ್ಯಕ್ತಿತ್ವವ ರೂಪಿಸುವ
ಶಿಸ್ತು, ನಿನ್ನ ಶಿಸ್ತಿನ ಜೀವನ
ನಮಗೆಲ್ಲ ಸ್ಫೂರ್ತಿ, ನನ್ನ
ನೆಮ್ಮದಿಯ ಜೀವನವು ನೀನಿತ್ತ
ದಾನ, ಅಮ್ಮ ನಿನಗೆ ಹೃದಯ
ಪೂರ್ವಕ ಕೋಟಿ ನಮನ
ಅಮ್ಮಂದಿರ ದಿನದ
ಶುಭಾಶಯಗಳೊಂದಿಗೆ

**- ಎಸ್.ಸಿದ್ದೇಶ್ ಕುರ್ಕಿ**

## ಹಣದುಬ್ಬರ 34 ತಿಂಗಳಲ್ಲೇ ಕಡಿಮೆ

ನವದೆಹಲಿ, ಮೇ 15 - ಸಗಟು ಹಣದುಬ್ಬರ ದರ 34 ತಿಂಗಳಲ್ಲೇ ಅತಿ ಕಡಿಮೆ ಋಣಾತ್ಮಕ ಶೇ.0.92ಕ್ಕೆ ಇಳಿದಿದೆ. ಆಹಾರ, ಇಂಧನ ಹಾಗೂ ಉತ್ಪಾದನಾ ವಸ್ತುಗಳ ಬೆಲೆ ಇಳಿಕೆಯಿಂದಾಗಿ ಏಪ್ರಿಲ್ ತಿಂಗಳಲ್ಲಿ ಹಣದುಬ್ಬರ ಕಡಿಮೆಯಾಗಿದೆ. ಸಗಟು ಹಣದುಬ್ಬರ ಸೂಚ್ಯಂಕ ಕಳೆದ 11 ತಿಂಗಳಿನಿಂದ ಇಳಿಮುಖವಾಗಿದೆ. ಏಪ್ರಿಲ್ ತಿಂಗಳಲ್ಲಿ ಋಣಾತ್ಮಕ ಹಂತಕ್ಕೆ ಬಂದಿದೆ. ಈ ಹಿಂದೆ 2020ರ ಜೂನ್‌ನಲ್ಲಿ ಹಣದುಬ್ಬರ ಋಣಾತ್ಮಕ 1.81ರ ಹಂತದಲ್ಲಿತ್ತು.

ಕಳೆದ ಮಾರ್ಚ್ ತಿಂಗಳಲ್ಲಿ ಹಣದುಬ್ಬರ ಶೇ.1.34ರಷ್ಟಿತ್ತು. ಕಳೆದ ವರ್ಷ ಏಪ್ರಿಲ್‌ನಲ್ಲಿ ಶೇ.15.38ರಷ್ಟಿತ್ತು.

## ಪಡಿತರ ಆಹಾರ ಧಾನ್ಯ ಹಂಚಿಕೆ

ದಾವಣಗೆರೆ, ಮೇ 15-ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ವಿವಿಧ ವರ್ಗಗಳ ಪಡಿತರ ಚೀಟಿದಾರರಿಗೆ ಮೇ-2023 ಮಾಹೆಗೆ ಅನ್ವಯವಾಗುವಂತೆ ಉಚಿತ ಪಡಿತರ ಧಾನ್ಯ ಪಡೆಯಲು ನ್ಯಾಯಬೆಲೆ ಅಂಗಡಿಗಳಿಗೆ ಹಂಚಿಕೆ ಮಾಡಲಾಗಿದೆ.

ಅಂತ್ಯೋದಯ ಪಡಿತರ ಚೀಟಿದಾರಿಗೆ 21 ಕೆ.ಜಿ ಅಕ್ಕಿ ಮತ್ತು ಪ್ರತಿ ಕಾರ್ಡಿಗೆ 14 ಕೆ.ಜಿ ರಾಗಿ, ಆದ್ಯತಾ ಪಡಿತರ ಚೀಟಿದಾರರಿಗೆ 4 ಕೆ.ಜಿ ಅಕ್ಕಿ ಮತ್ತು ಪ್ರತಿ ಸದಸ್ಯರಿಗೆ 2 ಕೆ.ಜಿ ರಾಗಿ ಉಚಿತವಾಗಿ ವಿತರಿಸಲಾಗುತ್ತದೆ ಹಾಗೂ ಪ್ರತಿ ಕೆ.ಜಿ ಗೆ ರೂ 15 ರಂತೆ ಒಪ್ಪಿಗೆ ನೀಡಿದ ಎ.ಪಿ.ಎಲ್ ಏಕಸದಸ್ಯರನ್ನು ಪಡಿತರ ಚೀಟಿದಾರರಿಗೆ 5 ಕೆ.ಜಿ, ಎರಡು ಮತ್ತು ಹೆಚ್ಚಿನ ಸದಸ್ಯ ಹೊಂದಿರುವವರಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸಲಾಗುವುದು ಎಂದು ದಾವಣಗೆರೆ ತಾಲ್ಲೂಕು ತಹಶೀಲ್ದಾರ್ ಡಾ. ಅಶ್ವತ್ಥ್ ಎಂ.ಬಿ ತಿಳಿಸಿದ್ದಾರೆ.


**TEACHERS REQUIRED**

***Walk in interview***

Applications are inivited for the following Post

English Teacher BA., B.Ed.,
Hindi Teacher Hindi B.Ed.,
Mathematics Teacher B.Sc., B.Ed.,
P.E. Teacher B.PEd.,

*For more details contact :*

**80738 45050, 97432 96956**


SHAMANUR EDUCATION TRUST (R)
SMT. PUSHPA SHAMANUR MAHALINGAPPA
CBSE / ICSE RESIDENTIAL SCHOOL & P U SCIENCE COLLEGE
Hearty CONGRATULATIONS to our Top performers in ICSE and CBSE board examination 2023.
39 DISTINCTION
73 FIRST CLASS
GIRIJA K 96%
PRAGNA BHASKAR 92.2%
PRATHIBHA K R 92.2%
SAMIKSHA PATIL 91.4%
KEERTHANA D R 89%
MAHESH B S 87.2%
PUNITH PATEL 94.2%
LALITHAMBA B MATHIHALLI 94.2%
RISHABH H 93%
SHIVANI SAVAJJI M 92%
SMITHA K A 87%
LEMUEL AARON CRASTA 87%
CHIRANJEEVI K P 86.2%
VARSHA H H 86.2%
TULASI REDDY B N 85.2%
SPOORTHI J R 84.4%
PRANAV S 84%
SUBRAMANYA B S 84%
ROHAN G 83.4%
ADITHI M K 83.2%
AISHWARYA JP 91%
SAI SAMARTH N 91%
PRAJWAL KOTHARI S 90%
DHANANJAY S.S 88%
PRAFUL PANDITH A N 83%
SRUSHTI K G 82.2%
DEEKSHA C 82%
GREESHMA K S 82%
HARSHITHA M JAVALI 81.4%
PRASHANTHI M 88%
SANJANA.D REVANKAR 86%
MONISHA N 82%
SANJANA U.G 82%
KEERTHANA T R 81.4%
SHUBHANGI R KURDEKAR 81.2%
KHUSHI B S 81%
ARUNKUMAR G DEVARMANI 81%
RAJESHWARI M S 80.4%
ADMISSIONS OPEN FOR I PUC. SEPERATE CAMPUS FOR GIRLS AND BOYS
: 8970071100, 9108411808, 7259222250, 08192-263766.
OUR BRANCHES : CBSE school - Davangere, ICSE school - Bathi, Vidya Vaibhav -Pre-School- Davangere.
#5335,1st main, Swami Vivekananda Badavane, DAVANAGERE & HALE BATHI.


ನೂತನ ಶಾಸಕರುಗಳಿಗೆ ಹೃದಯಪೂರ್ವಕ ಅಭಿನಂದನೆಗಳು
ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಅತ್ಯಧಿಕ ಮತಗಳನ್ನು ಗಳಿಸಿ, ಶಾಸಕರಾಗಿ ಆಯ್ಕೆಯಾಗಿರುವ
ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಸದಸ್ಯರಾದ ಡಾ. ಶಾಮನೂರು ಶಿವಶಂಕರಪ್ಪ ಅವರಿಗೂ,
ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಸದಸ್ಯರಾದ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೂ,
ಚನ್ನಗಿರಿ ವಿಧಾನಸಭಾ ಕ್ಷೇತ್ರದ ಸದಸ್ಯರಾದ ಶ್ರೀ ಬಸವರಾಜು ವಿ. ಶಿವಗಂಗಾ ಅವರಿಗೂ ಹಾಗೂ
ಮಾಯಕೊಂಡ ವಿಧಾನಸಭಾ ಕ್ಷೇತ್ರದ ಶ್ರೀ ಕೆ.ಎಸ್. ಬಸವಂತಪ್ಪ ಅವರಿಗೂ
ಹೃದಯಪೂರ್ವಕ ಅಭಿನಂದನೆಗಳು.
✦ ಆರ್.ಎಲ್.ಹೆಚ್. ಗ್ರೂಪ್ಸ್ ✦ ಆರ್.ಎಲ್.ಹೆಚ್. ರೈಸ್ ಇಂಡಸ್ಟ್ರೀಸ್
✦ ಚಾಮುಂಡೇಶ್ವರಿ ಬಾರ್ & ರೆಸ್ಟೋರೆಂಟ್ ✦ ರಕ್ಷಿತ ಪೇಂಟ್ಸ್
✦ ದರ್ಶನ್ ಸಿಮೆಂಟ್ & ಸ್ಟೀಲ್ಸ್ ✦ ಸಂತೋಷ್ ಬಾರ್ & ರೆಸ್ಟೋರೆಂಟ್
✦ ಚಾಮುಂಡಿ ಬಾರ್ ✦ ಸ್ಪಿರಿಟ್ ವೈನ್ಸ್ ✦ ಕಾಕ್‌ಟೈಲ್ MRP